
ಆರ್ | ಎಸ್ | ಎಸ್

ಆಳ ಮತ್ತು ಅಗಲ

ಪರಿಷ್ಕೃತ ಮುದ್ರಣ

ದೇವನೂರ ಮಹಾದೇವ



ದೇವನೂರ ಮಹಾದೇವ

ಆರ್ ಎಸ್ ಎಸ್

ಆಳ ಮತ್ತು ಅಗಲ

RSS - AALA MATTU AGALA (Kannada)
RSS - DEPTH AND BREADTH
Authored by Devanura Mahadeva

Second Print : 2022 Pages : viii + 64 Price : ₹ 40
Paper : 70 gsm Maplitho 13.6 Kg (1/8 Crown Size)

ಮೊದಲನೇ ಮುದ್ರಣ(ನವಕರ್ನಾಟಕ): 2022 (ಜುಲೈ)
ಎರಡನೇ ಮುದ್ರಣ (ನವಕರ್ನಾಟಕ) : 2022 (ಜುಲೈ)

ಬೆಲೆ : ₹ 40

ಮುಖಪುಟ ವಿನ್ಯಾಸ : ಕೆ. ಜೆ. ಸಚ್ಚಿದಾನಂದ
ಒಳಪುಟ ವಿನ್ಯಾಸ : ದಿ ರಂಗು, ಮೈಸೂರು

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22161900 / 22161901 / 22161902

ಶಾಖೆಗಳು/ ಮಳಿಗೆಗಳು
ಕ್ರೆಸೆಂಟ್ ರಸ್ತೆ, ಬೆಂಗಳೂರು - 1, ✆ 080-22161913/14, ✉ : nkpsales@gmail.com
ಕೆಂಪೇಗೌಡ ರಸ್ತೆ, ಬೆಂಗಳೂರು - 9, ✆ 080-22203106, ✉ : nkpkgr@gmail.com
ಶರವು ದೇವಸ್ಥಾನ ರಸ್ತೆ, ಮಂಗಳೂರು-1, ✆ 0824-2441016, ✉ : nkpmng@gmail.com
ಬಲ್ಮಠ, ಮಂಗಳೂರು - 1, ✆ 0824-2425161, ✉ : nkpbalmatta@gmail.com
ರಾಮಸ್ವಾಮಿ ವೃತ್ತ, ಮೈಸೂರು-24, ✆ 0821-2424094, ✉ : nkpmysuru@gmail.com
ಸ್ಟೇಷನ್ ರಸ್ತೆ, ಕಲಬುರಗಿ - 2, ✆ 08472-224302, ✉ : nkpglb@gmail.com

ಮುದ್ರಕರು : ಎಸ್.ಆರ್.ಎಸ್. ಎಂಟರ್‌ಪ್ರೈಸಸ್, ಬೆಂಗಳೂರು-560 079

0207226163

Published by Navakarnataka Publications Private Limited, Embassy Centre Crescent Road, Bengaluru - 560 001. Email : navakarnataka@gmail.com

ಕಾಲಾನುಕ್ರಮ ಪ್ರಕಟಣೆಗಳು

ಮುದ್ರಣ ಸಂಖ್ಯೆ	ತಿಂಗಳು/ಇಸವಿ	ಪ್ರತಿಗಳು	ಪ್ರಕಾಶಕರು
ಪ್ರಥಮ ಮುದ್ರಣ :	ಜೂನ್ 2022	9000	

ಪ್ರಕಾಶಕರು : ನಡೆ–ನುಡಿ, ಚಿಕ್ಕನಾಯಕನಹಳ್ಳಿ; ಮಾನವ ಬಂಧುತ್ವ ವೇದಿಕೆ; ಗೌರಿ ಮೀಡಿಯಾ ಟ್ರಸ್ಟ್; ಜನಸ್ಪಂದನ ಟ್ರಸ್ಟ್, ತಿಪಟೂರು; ಅಭಿರುಚಿ ಪ್ರಕಾಶನ; ಭಾರತೀಯ ಪರಿವರ್ತನ ಸಂಘ **ಜೊತೆಗೂಡಿ**

2ನೇ ಮುದ್ರಣ	ಜುಲೈ 2022	6000	ಸಂಕಥನ ಮಂಡ್ಯ
3ನೇ ಮುದ್ರಣ	ಜುಲೈ 2022	10000	ಗೌರಿ ಮೀಡಿಯಾ ಟ್ರಸ್ಟ್
4ನೇ ಮುದ್ರಣ	ಜುಲೈ 2022	6000	ನವಕರ್ನಾಟಕ
5ನೇ ಮುದ್ರಣ	ಜುಲೈ 2022	5000	ಅಭಿರುಚಿ ಪ್ರಕಾಶನ
6ನೇ ಮುದ್ರಣ	ಜುಲೈ 2022	19000	ಕ್ರಿಯಾ ಪ್ರಕಾಶನ ; ಪ್ರಜ್ಞಾವಂತ ಭಾರತ ; ಓದು ವಿನಿಮಯ ಪ್ರಕಾಶನ **ಜೊತೆಗೂಡಿ**
7ನೇ ಮುದ್ರಣ	ಜುಲೈ 2022	5000	ಲಡಾಯಿ ಪ್ರಕಾಶನ
8ನೇ ಮುದ್ರಣ	ಜುಲೈ 2022	24000	9 ಪ್ರಕಾಶಕರು ಜೊತೆಗೂಡಿ

ಪ್ರಕಾಶಕರು : ನೀಲಿಹೆಜ್ಜೆ; ಗೌರಿ ಮೀಡಿಯ ಟ್ರಸ್ಟ್; ನಯನ, ಮಾನಸ–ಗಂಗೋತ್ರಿ ಕ್ಯಾಂಪಸ್ ವಿದ್ಯಾರ್ಥಿಗಳು; ಶ್ಯಾಮ್ ಪ್ರಕಾಶನ; ದಾವಣಗೆರೆ ಯುವಕರು; ಆದಿಮ, ಕೋಲಾರ; ಬಿ.ಆರ್. ಅಂಬೇಡ್ಕರ್ ಸಂಘ, ವಿಜಯನಗರ ಜಿಲ್ಲೆ; ಪತ್ರಕರ್ತರ ಬಳಗ, ದೊಡ್ಡಬಳ್ಳಾಪುರ; ಯಶ್ವಂತ ಪ್ರಕಾಶನ; ಕಲ್ಬುರ್ಗಿ ಮಹಿಳಾ ಹೋರಾಟಗಾರರು; ಭೀಮ್ ಟ್ರಸ್ಟ್ ಫಾರ್ ಡೆವಲಪ್‌ಮೆಂಟ್, ಚಿಕ್ಕಬಳ್ಳಾಪುರ **ಜೊತೆಗೂಡಿ**

ಅರ್ಪಣೆ

'ಹುಟ್ಟುತ್ತ ವಿಶ್ವಮಾನವ'ರಾದ ಮಕ್ಕಳು

'ಬೆಳೆಯುತ್ತಲೂ ವಿಶ್ವಮಾನವ'ರಾಗಿ ಉಳಿಯಲಿ

ಎಂಬ ಆಶಯದೊಡನೆ

ಗಮನಿಸಿರಿ

ಈ ಹೊತ್ತಿಗೆಯನ್ನು ನೀವೂ ನಿಮ್ಮ ಹೆಸರಿನಲ್ಲಿ ಪ್ರಕಟಿಸಬಹುದು. ನೀವೇ ಪ್ರಕಾಶಕರಾಗಬಹುದು! ಯಾವುದೇ ವ್ಯಕ್ತಿ, ಸಂಸ್ಥೆ, ಪ್ರಕಾಶಕರು ಪ್ರಕಟಿಸಬಹುದು. ಹೊತ್ತಿಗೆ ಪ್ರಕಟಿಸಲು ತಗುಲುವ ವೆಚ್ಚವನ್ನು ಈ ಕೆಳಗಿನ ನಿರ್ವಹಣಾಕಾರರ ಸಂಪರ್ಕ ವಿಳಾಸಕ್ಕೆ ಕಳಿಸಿಕೊಟ್ಟರೆ ಮುದ್ರಣ ಮಾಡಿಸಿ ಹೊತ್ತಿಗೆ ತಲುಪಿಸುತ್ತಾರೆ. ಪುಸ್ತಕದ ಹಕ್ಕುಸ್ವಾಮ್ಯ ಲೇಖಕರ ಬಳಿಯೇ ಇದೆ. ಆದರೆ ಹೊತ್ತಿಗೆಯನ್ನು ನಿಗದಿತ ಬೆಲೆಯಲ್ಲಿ ಪ್ರಕಟಿಸುವವರು ಯಾವುದೇ ಗೌರವಧನವನ್ನು ಲೇಖಕರಿಗೆ ನೀಡಬೇಕಾಗಿಲ್ಲ. ನಿಗದಿತ ಬೆಲೆಗಿಂತ ಹೆಚ್ಚು ಬೆಲೆ ಇಟ್ಟರೆ 10% ಗೌರವಧನ ನೀಡಬೇಕು. ಪ್ರಕಟವಾದ ಮೇಲೆ ಹತ್ತು ಪ್ರತಿಗಳನ್ನು ಲೇಖಕರಿಗೆ ಕಳುಹಿಸಿಕೊಡಿರಿ. ಈಗ ಯಾರಿಗೂ ತಾವು ಮುದ್ರಿಸಿಕೊಳ್ಳಲು ಪಿಡಿಎಫ್ ಪ್ರತಿ ಕಳಿಸಿಕೊಡಲಾಗುವುದಿಲ್ಲ.

ಹೀಗೆಯೇ ಈ ಕೆಳಕಂಡ ಕೃತಿಗಳನ್ನು ಕೂಡ ತಮ್ಮ ಹೆಸರಿನಲ್ಲಿ ಪ್ರಕಟಿಸಲು ಇಚ್ಛಿಸುವ ಆಸಕ್ತ ವ್ಯಕ್ತಿ /ಸಂಘ/ಪ್ರಕಾಶಕರು ಸಂಪರ್ಕಿಸಬಹುದು.

ದೇವನೂರ ಮಹಾದೇವ, ಶಶಿಕಾಂತ ಸೆಂಥಿಲ್, ಐ.ಎ.ಎಸ್.

ಜೊತೆಗೆ ಎ.ಎಸ್.ಪುತ್ತಿಗೆ ಅವರ ಹೊತ್ತಿಗೆ

* ಈಗ ಭಾರತ ಮಾತಾಡುತ್ತಿದೆ ಹಾಗೂ
  ನಾನೇಕೆ ರಾಜೀನಾಮೆ ನೀಡಿದೆ? ಮತ್ತು ನಿಗೂಢ ಅಕ್ಷರಗಳು

ದೇವನೂರ ಮಹಾದೇವ ಅವರ ಹೊತ್ತಿಗೆ

* ಒಂದು ಪ್ರಣಾಳಿಕೆ
* ಜನಾಂದೋಲನಗಳ ಮಹಾಮೈತ್ರಿ ಜಾಥಾ ಮತ್ತು

ಮಹಾಮೈತ್ರಿಗೆ ನಡೆನುಡಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

ಅಭಿರುಚಿ ಗಣೇಶ್: 9980560013,ಮಹಾಲಿಂಗಪ್ಪ ಆಲಬಾಳ: 9620711704, ಶ್ರೀಪಾದ ಭಟ್: 9880453799, ಮುತ್ತುರಾಜ್: 7353770202, ಸಿದ್ದಪ್ಪ ಮೂಲಗೆ : 9482299648

ನಿರ್ವಹಣೆ :

ಅನಿಲ್‌ಕುಮಾರ್ ಚಿಕ್ಕದಾಳವಟ್ಟ : 9481715022

ಪ್ರಕಾಶಕರ ಮಾತು

'ಸಮಾಜದಲ್ಲಿ ನ್ಯಾಯ ಜೀವಿಸಬೇಕಾಗಿದೆ' ಎಂಬ ಆಶಯವನ್ನು ಹೊತ್ತ ಜನಪರ ಚಿಂತಕ ದೇವನೂರ ಮಹಾದೇವ ಅವರ 'ಆರ್.ಎಸ್.ಎಸ್. ಆಳ ಮತ್ತು ಅಗಲ' ಎಂಬ ಕೃತಿ ಸಂಚಲನವನ್ನು ಮೂಡಿಸಿದೆ. ಸಮಾಜದಲ್ಲಿ ನ್ಯಾಯವನ್ನು, ಸಹಬಾಳ್ವೆಯನ್ನು, ಸೌಹಾರ್ದತೆಯನ್ನು ನಾಶ ಮಾಡುತ್ತಿರುವ ಶಕ್ತಿಗಳ ಹುನ್ನಾರವನ್ನು ಈ ಕೃತಿ ಬಯಲಿಗೆಳೆದಿದೆ. ಸಂವಿಧಾನವನ್ನು ಗೌರವಿಸುವ, ಸೌಹಾರ್ದತೆಯನ್ನು ಬಯಸುವ, ಒಕ್ಕೂಟ ವ್ಯವಸ್ಥೆಯನ್ನು, ಬಹುತ್ವವನ್ನು ಒಪ್ಪುವ ಎಲ್ಲ ಜನಪರ ಚಳುವಳಿಗಾರರಿಗೆ ಒಂದು ಪ್ರಣಾಳಿಕೆಯನ್ನು ದೇವನೂರ ಮಹಾದೇವ ಅವರು ಕೊಟ್ಟಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಿಂತನೆಯ ಮೂಲ ಗ್ರಂಥಗಳಾದ 'ಮನುಸ್ಮೃತಿ' ಮತ್ತು ಗೋಲ್ವಾಲ್ಕರ್ ಅವರ 'ಚಿಂತನಗಂಗಾ' ಕೃತಿಗಳಲ್ಲಿನ ಜೀವ ವಿರೋಧಿ ಮತ್ತು ಛಿದ್ರಕಾರಿ ತತ್ವಗಳನ್ನು ಇಂದು ಹೇಗೆ ಜಾರಿಗೆ ತರಲಾಗುತ್ತಿದೆ ಎಂಬುದನ್ನು ಇಂದಿನ ಸಂದರ್ಭ, ಸನ್ನಿವೇಶಗಳನ್ನು ಉದಾಹರಣೆಗಳ ಮೂಲಕ ಸಾಬೀತುಪಡಿಸಿದ್ದಾರೆ. ಇಂದು ದೇಶದಲ್ಲಿ ಆಡಳಿತ ನಡೆಸುತ್ತಿರುವುದು ಒಂದು ರಾಜಕೀಯ ಪಕ್ಷವಲ್ಲ. ಆಡಳಿತದ ಸೂತ್ರ ಹಿಡಿದಿರುವುದು ಆರ್.ಎಸ್.ಎಸ್. ಎಂಬುದನ್ನು ದೇವನೂರ ಅವರು ದೇಶದಲ್ಲಿ ನಡೆಯುತ್ತಿರುವ ಆತಂಕಕಾರಿ ವಿದ್ಯಮಾನಗಳ ಮೂಲಕ ವಿಶ್ಲೇಷಿಸಿದ್ದಾರೆ. "ಭಾರತ ಸಂವಿಧಾನದ ಬಹುಮುಖ್ಯ ವ್ಯವಸ್ಥೆಯಾದ ಒಕ್ಕೂಟ ಸ್ವರೂಪದ ಪ್ರಾಣ ತೆಗೆಯುವ ಮೂಲಕ ಭಾರತವು 'ರಾಜ್ಯಗಳ ಒಕ್ಕೂಟ' ಎಂಬುದು ದುರ್ಬಲವಾಗಿ 'ಬಲಿಷ್ಠ ಕೇಂದ್ರ' ಅನ್ನುವುದು ಬಲವಾಯ್ತು. ಹಾಗೇ ಸಂಸ್ಕೃತವನ್ನು ಸಂಪರ್ಕ ಭಾಷೆ ಮಾಡುವ ಗುರಿ ತಲುಪಲು ಮೊದಲ ಹಂತವಾಗಿ ಹಿಂದಿಯನ್ನು ಸಂಪರ್ಕ ಭಾಷೆ ಮಾಡುವ ಸಂಚೂ ಇಣುಕಿ ನೋಡುತ್ತಿದೆ. ಇದು ಏಕ ರಾಷ್ಟ್ರ, ಏಕ ಭಾಷೆ, ಏಕ ಜನಾಂಗದ ಹಿರಿಮೆ, ಏಕ ನಾಯಕ ಇತ್ಯಾದಿ ಬಹುತ್ವ ವಿರೋಧಿ ಹಿಡನ್ ಅಜೆಂಡಾದ ಒಂದೊಂದೇ ಹೆಜ್ಜೆಗಳು" ಎಂದು ಹೇಳುವ ದೇವನೂರ ಅವರು ಈ ಹಿಡನ್ ಅಜೆಂಡಾ ಜಾರಿಗಾಗಿ ಆರ್.ಎಸ್.ಎಸ್. ಹರಡುತ್ತಿರುವ

ಸುಳ್ಳುಗಳನ್ನು ಎತ್ತಿ ತೋರಿಸಿದ್ದಾರೆ. ನಾಝಿ, ಫ್ಯಾಸಿಸ್ಟ್ ಮಾದರಿಯಲ್ಲಿ ಜನಾಂಗೀಯ ದ್ವೇಷ ಬೆಳೆಸುವ, ಅದಕ್ಕೆ ಶೂದ್ರರನ್ನೇ ಬಳಸಿಕೊಳ್ಳುತ್ತಿರುವ ಕುತಂತ್ರವನ್ನು ಬಯಲಿಗೆಳೆದಿದ್ದಾರೆ.

ಪ್ರಸ್ತುತ ಪಠ್ಯ ವಿವಾದ, ಜಿ.ಎಸ್.ಟಿ., ಮತಾಂತರ ನಿಷೇಧ, ಭೂಕಬಳಿಕೆ, ಇತಿಹಾಸ ತಿರುಚುವಿಕೆ, ಆರ್ಥಿಕ ನೀತಿ, ಶಿಕ್ಷಣ ನೀತಿ, ಕೈಗಾರಿಕಾ ನೀತಿ ಇಂಥ ಎಲ್ಲ ವಿಷಯಗಳ ಹಿಂದೆಯೂ ಆರ್.ಎಸ್.ಎಸ್.ನ ಜನವಿರೋಧಿ, ಜೀವವಿರೋಧಿ ನೀತಿ ಹೇಗೆ ಕೆಲಸ ಮಾಡುತ್ತಿದೆ ಎಂಬ ವಿಷಯಗಳನ್ನು ಈ ಕಿರುಹೊತ್ತಿಗೆ ಒಳಗೊಂಡಿದೆ. ದೇಶದಾದ್ಯಂತ ಸುಳ್ಳುಗಳ ಮೂಲಕ ಜನಾಂಗೀಯ ಸಂಘರ್ಷ ಹುಟ್ಟುಹಾಕಿ 'ವರ್ಣಾಶ್ರಮ' ವ್ಯವಸ್ಥೆಯನ್ನು ಮರುಸ್ಥಾಪಿಸುವ ಪಿತೂರಿಯನ್ನು ಈ ಕೃತಿ ಬಯಲು ಮಾಡಿದೆ. ಆಡಳಿತ ವ್ಯವಸ್ಥೆಯಲ್ಲಿ ನುಸುಳಿಕೊಂಡಿರುವ ಮನುವಾದಿಗಳ ಕುತಂತ್ರವನ್ನು ಅರ್ಥ ಮಾಡಿಕೊಳ್ಳಲು ಈ ಕೃತಿ ಜನಪರ ಚಳುವಳಿಗಾರರಿಗೆ ಕೈಪಿಡಿಯಾಗಿದೆ.

ದೇವನೂರ ಅವರು ಈ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಜನಪರ ಚಳುವಳಿಗಾರರಿಗೆ ಕರೆ ಕೊಡುತ್ತಾರೆ. "ಈಗಲಾದರೂ ಸಮಾಜವನ್ನು ಮುನ್ನಡೆಗೆ ಒಯ್ಯಬೇಕೆಂದಿರುವ ಸಂಘ/ಸಂಘಟನೆ/ ಪಕ್ಷಗಳು ತಂತಮ್ಮ ಸಣ್ಣಪುಟ್ಟ ಝರಿಗಳಂತಿರುವ ಸ್ಥಿತಿಯನ್ನು ಮೀರಿ ಒಕ್ಕೂಟವಾಗಿ ಹೊಳೆಯಾಗಿ ಹರಿಯಬೇಕಿದೆ. ಅದಕ್ಕಾಗಿ ತಾನೇ ಶ್ರೇಷ್ಠ ಎಂಬ ಮಡಿರೋಗವನ್ನು ಬಿಡಬೇಕಾಗಿದೆ" ಎಂದು ಹೇಳುತ್ತಾರೆ. ಎಲ್ಲ ಜನಪರ ಚಳುವಳಿಗಳ ನಾಯಕರು, ಕಾರ್ಯಕರ್ತರು, ಸಾರ್ವಜನಿಕರು ಈ ಕೃತಿಯನ್ನು ಓದಲಿ, ದೇಶ, ಸಮಾಜ ಎದುರಿಸುತ್ತಿರುವ ಸಂಕಟವನ್ನು ಅರ್ಥ ಮಾಡಿಕೊಳ್ಳಲಿ, ಒಗ್ಗೂಡಿ ನೆಮ್ಮದಿಯ ನಾಡು ಕಟ್ಟಲು ಮುಂದಾಗಲಿ ಎಂಬ ಆಶಯಗಳೊಂದಿಗೆ ನವಕರ್ನಾಟಕ ಪ್ರಕಾಶನ ಈ ಕೃತಿಯನ್ನು ಪ್ರಕಟಿಸುತ್ತಿದೆ.

ಈ ಕೃತಿಯನ್ನು ಪ್ರಕಟಿಸಲು ಅನುಮತಿ ನೀಡಿರುವ ದೇವನೂರ ಮಹಾದೇವ ಅವರಿಗೂ, ಸಹಕರಿಸಿದ ಅಭಿರುಚಿ ಗಣೇಶ್ ಅವರಿಗೂ ನಾವು ಆಭಾರಿ.

ಡಾ|| ಸಿದ್ದನಗೌಡ ಪಾಟೀಲ
ನವಕರ್ನಾಟಕ ಪ್ರಕಾಶನ

ನವಕರ್ನಾಟಕ ಪ್ರಕಟಣೆಗಳು

ತತ್ವಶಾಸ್ತ್ರ, ವಿಚಾರ ಸಾಹಿತ್ಯ, ಇತಿಹಾಸ

ಪ್ರಾಚೀನ ಭಾರತದಲ್ಲಿ ಭೌತಿಕವಾದ (ಚಾರ್ವಾಕ/ಲೋಕಾಯತ ದರ್ಶನದ ಒಂದು ಅಧ್ಯಯನ) *ಡಾ॥ ದೇವಿಪ್ರಸಾದ ಚಟ್ಟೋಪಾಧ್ಯಾಯ*

ಲೋಕಾಯತ *ಡಾ॥ ದೇವಿಪ್ರಸಾದ ಚಟ್ಟೋಪಾಧ್ಯಾಯ*

ಭೌತವಾದೀಯ ಚಿಂತನೆಗಳು *ಡಾ॥ ಕೆ. ಎಲ್. ಗೋಪಾಲಕೃಷ್ಣಯ್ಯ*

ಹಿಂದೂ ಧರ್ಮ : ಸಂಶೋಧಿತ ವಿವೇಚನೆ *ವಿ. ಕೆ. ರಾಜವಾಡೆ*

ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಮಹತ್ವ *ಎಸ್. ಜಿ. ಸರ್ದೇಸಾಯಿ (ಸಂಗ್ರಹಾನುವಾದ : ಕೆ.ಎಲ್.ಗೋಪಾಲಕೃಷ್ಣ ರಾವ್)*

ಭಾರತೀಯ ಇತಿಹಾಸದ ವೈಲಕ್ಷಣ್ಯಗಳು *ಎಸ್. ಜಿ. ಸರ್ದೇಸಾಯಿ*

ಭಾರತೀಯ ತತ್ವಜ್ಞಾನ. ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ *ಎಸ್. ಜಿ. ಸರ್ದೇಸಾಯಿ (ಅನು : ಗೌರೀಶ ಕಾಯ್ಕಿಣಿ)*

ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ *ಎಸ್.ಜಿ.ಸರ್ದೇಸಾಯಿ*

ಭಗವದ್ಗೀತೆ : ಒಂದು ಅವಲೋಕನ *ಡಾ॥ ಜಿ. ರಾಮಕೃಷ್ಣ*

ರಾಮಾಯಣ, ಮಹಾಭಾರತ ಮತ್ತು ಧರ್ಮ *ಇರಾವತಿ ಕರ್ವೆ*

ಧರ್ಮದ ಕುರಿತು *ಅಜಯ ಕುಮಾರ ಸಿಂಹ*

ಧರ್ಮ : ಮಾನವ ಸಂಸ್ಕೃತಿ ಮತ್ತು ವಿಕಾಸ *ಡಾ॥ ರಾವ್‌ಸಾಹೇಬ್ ಕಸಬೆ*

ಧರ್ಮ ಪರೀಕ್ಷೆ *ಡಾ॥ ರಹಮತ್ ತರೀಕೆರೆ*

ಹಾಸು ಹೊಕ್ಕು (ಸಂಸ್ಕೃತಿ–ಚರಿತ್ರೆ–ಭಾಷೆ–ರಾಜಕಾರಣ–ಸಾಹಿತ್ಯ) *ಡಾ॥ ರಹಮತ್ ತರೀಕೆರೆ*

ಸ್ವಾಮಿ ವಿವೇಕಾನಂದ. ಹೊಸ ಶೋಧ *ಡಾ॥ ದತ್ತಪ್ರಸಾದ ದಾಭೋಲ್ಕರ್*

ಗಾಂಧಿ ಕಗ್ಗೊಲೆ. ಕಾರಣ – ಪರಿಣಾಮ *ಕೋ. ಚೆನ್ನಬಸಪ್ಪ*

ಮಹಾತ್ಮಾ ಗಾಂಧಿ ಕೊಲೆ – ಹಿನ್ನೆಲೆ *ಆನಂದ ಮೆಣಸೆ*

ಕೋಮುವಾದ ಮತ್ತು ಭಾರತೀಯ ಇತಿಹಾಸ ಲೇಖನ *ರೋಮಿಲಾ ಥಾಪರ್ ಮತ್ತಿತರರು (ಅನು : ಕೆ. ಎಲ್. ಗೋಪಾಲಕೃಷ್ಣ ರಾವ್)*

ಇತಿಹಾಸದ ರಾಜಕೀಯ *ಡಾ॥ ಕೆ. ಎಲ್. ಗೋಪಾಲಕೃಷ್ಣಯ್ಯ*

ಹಿಂದೂ ಅಸ್ಮಿತೆಗಾಗಿ ಹುಡುಕಾಟ *ಡಾ॥ ಡಿ.ಎನ್.ಝಾ (ಅನು : ಪ್ರದೀಪ್ ಶೆಟ್ಟಿ)*

ಆರ್ಯರಿಗಾಗಿ ಹುಡುಕಾಟ *ಪ್ರೊ॥ ಆರ್. ಎಸ್. ಶರ್ಮಾ*

ಭಾರತಕ್ಕೆ ಆರ್ಯರ ಪ್ರವೇಶ *ಪ್ರೊ॥ ಆರ್. ಎಸ್. ಶರ್ಮಾ*

ಒಳಗೆ

ಮೊದಲ ಮಾತು

ಆರ್‌ಎಸ್‌ಎಸ್‌ನ ನಿಜ ಸ್ವರೂಪವನ್ನು ಮತ್ತು ಉದ್ದೇಶವನ್ನು ಸೂಕ್ಷ್ಮವಾಗಿ ಗಮನಿಸಿ ಜನರ ಮುಂದಿಡುವ ಒಂದು ಪ್ರಯತ್ನ ಇದು. ಈ ದೇಶವನ್ನು ಆರ್‌ಎಸ್‌ಎಸ್ ಎತ್ತ ಒಯ್ಯಲು ಶ್ರಮಿಸುತ್ತಿದೆ ಎನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಮತ್ತು ಈ ಸಂಘಟನೆಯ ಬಗ್ಗೆ ಇರುವ ಗ್ರಹಿಕೆ ಹಾಗೂ ಆ ಸಂಘಟನೆಯ ನಿಜ ಬಣ್ಣದ ನಡುವೆ ಇರುವ ಅಂತರವನ್ನು ಜನರಿಗೆ ಮನದಟ್ಟು ಮಾಡಬೇಕೆಂಬುದರ ದಿಕ್ಕಲ್ಲಿ ಒಂದು ಹೆಜ್ಜೆ.

ಹೌದು, ಮನದಟ್ಟು ಮಾಡಬೇಕು, ನಿಜ. ಆದರೆ ಹೇಗೆ? ನಮ್ಮ ಜಾನಪದ ಕಥೆಗಳಲ್ಲಿ ಏಳು ಸಮುದ್ರಗಳ ಆಚೆಯಲ್ಲಿರುವ ಗುಹೆಯಲ್ಲಿ ತನ್ನ ಪ್ರಾಣವನ್ನು ಗಿಣಿ ರೂಪದಲ್ಲಿ ಬಚ್ಚಿಟ್ಟು, ಲೋಕಕ್ಕೆ ಬಂದು ಅವಾಂತರ ಮಾಡುತ್ತಾ ಯದ್ವಾತದ್ವಾ ವರ್ತಿಸುವ ಮಾಯಾವಿಯ ಕತೆ ಬರುತ್ತದೆ. ಅವನು ಮೊದಲೇ ಮಾಯಾವಿ. ಜೊತೆಗೆ ವೇಷಧಾರಿ. ಅವನ ರೂಪಗಳು ಅನೇಕ. ವಶೀಕರಣದಲ್ಲೂ ನಿಸ್ಸೀಮ. ಅವನಿಗೆ ಏನೇ ಮಾಡಿದರೂ

ಏನೂ ಆಗುವುದಿಲ್ಲವಂತೆ. ಯಾಕೆಂದರೆ ಅವನ ಪ್ರಾಣ ಯಾವುದೋ ಗುಹೆಯಲ್ಲಿ ಗಿಣಿ ರೂಪದಲ್ಲಿ ಸುರಕ್ಷಿತವಾಗಿರುತ್ತದೆ. ಇಂತಹ ಸಂದಿಗ್ಧತೆಯಲ್ಲಿ ಏನಾದರೂ ಮಾಡಲೇಬೇಕು ಎಂದರೆ ಮೊದಲು ಅದರ ಪ್ರಾಣ ಎಲ್ಲಿದೆ ಎಂಬುದನ್ನು ಪತ್ತೆ ಮಾಡಬೇಕಾಗಿದೆ. ಹುಡುಕಬೇಕಾಗಿದೆ. ಅಂತಹದ್ದೊಂದು ಪ್ರಯತ್ನದ ಭಾಗವಾಗಿ ಆರ್‌ಎಸ್‌ಎಸ್‌ನ ಗತಕಾಲದ ಪುರಾತನ ವಾಸನೆಯ ಬಾವಿಗೆ ಇಣುಕಿ ನೋಡಿದೆ. ಕಂಡ ದೃಶ್ಯ ಘೋರವಾಗಿದೆ. ಈ ಪುಟಾಣಿ ಪುಸ್ತಿಕೆಯಲ್ಲಿರುವುದು ಅದರ ಒಂದು ತುಣುಕು ಅಷ್ಟೆ. ಮುಂದೆ ವಿಸ್ತೃತವಾಗಿ ಬರೆಯುವವರಿಗೆ ಇದು ಒಂದಿಷ್ಟು ಪ್ರೇರಣೆಯಾದರೂ ಅದೇ ಸಾರ್ಥಕ.

ಈಗ ನನ್ನ ನೆನಕೆಗಳು: ಈ ಪುಟಾಣಿ ಪುಸ್ತಿಕೆಗೆ, ಅಳವಡಿಸಿಕೊಳ್ಳುವಂತಹ ಸಲಹೆಗಳನ್ನು, ಮಾಹಿತಿಗಳನ್ನು ನೀಡಿ ಇದರ ಗುಣಮಟ್ಟ ಹೆಚ್ಚಿಸಿದ ಗೆಳೆಯರಾದ ಶಿವಸುಂದರ್, ಪ್ರಸನ್ನ ಎನ್.ಗೌಡ, ಬಿ.ಶ್ರೀಪಾದ ಭಟ್, ಪ್ರೊ.ಕುಮಾರಸ್ವಾಮಿ ಇವರಿಗೆ ಹಾಗೂ ಇಲ್ಲಿನ ಕೆಲವು ಉಲ್ಲೇಖಗಳ ಕನ್ನಡ ಅನುವಾದಕ್ಕಾಗಿ ಸುರೇಶ್‌ಭಟ್ ಬಾಕ್ರಬೈಲು ಅವರಿಗೆ ಕೃತಜ್ಞತೆಗಳು.

– ದೇವ



ಗೋಳ್ವಾಲ್ಕರ್ ಅವರು ಆರ್.ಎಸ್.ಎಸ್.ಗೆ ಸುದೀರ್ಘ ಸರ ಸಂಚಾಲಕರು. ಆರ್.ಎಸ್.ಎಸ್.ನ ಪಿತಾಮಹ ಡಾ.ಹೆಡಗೆವಾರ್. ಸ್ವತಃ ಹೆಡಗೆವಾರ್ ಅವರಿಂದಲೇ ತನ್ನ ಗುರು, ತತ್ವಜ್ಞಾನಿ, ಮಾರ್ಗದರ್ಶಿ ಎನ್ನಿಸಿಕೊಂಡ ಸಾವರ್ಕರ್ ಹಾಗೂ ಗೋಳ್ವಾಲ್ಕರ್ ಅವರ ಬರವಣಿಗೆಗಳ ದಾಖಲೆಯಿಂದ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.

ಗೋಳ್ವಾಲ್ಕರ್ ಅವರ ದೇವರು:

"ನಮ್ಮಲ್ಲಿರುವ ಎಲ್ಲಾ ಶಕ್ತಿಗಳನ್ನು ಪ್ರಚೋದಿಸುವ 'ಜೀವಂತ' ಪರಮಾತ್ಮ ಬೇಕು. ಆದುದರಿಂದಲೇ ನಮ್ಮ ಹಿರಿಯರು ಹೇಳಿದರು: "ನಮ್ಮ ಸಮಾಜವೇ ನಮ್ಮ ದೇವರು... ಹಿಂದೂ ಜನಾಂಗವೇ 'ವಿರಾಟ ಪುರುಷ' ಸರ್ವಶಕ್ತನ ರೂಪ"

ಎಂದರು. 'ಹಿಂದು' ಎಂಬ ಪದವನ್ನು ಅವರು ಬಳಸದಿದ್ದರೂ 'ಪುರುಷ ಸೂಕ್ತ'ದಲ್ಲಿ ಬರುವ ಈ ಕೆಳಗಿನ ವರ್ಣನೆಯಲ್ಲಿ ಈ ಮಾತು ಸ್ಪಷ್ಟವಾಗುತ್ತದೆ– ಸೂರ್ಯ ಚಂದ್ರರೇ ದೇವರ ಕಣ್ಣುಗಳು, ಅವನ ನಾಭಿಯಿಂದ ನಕ್ಷತ್ರಗಳು ಮತ್ತು ಆಕಾಶ ಸೃಷ್ಟಿಯಾದವು ಎಂದು ಹೇಳಿದ ನಂತರ– ಬ್ರಾಹ್ಮಣನು ಆತನ ಶಿರ, ರಾಜನೇ ಬಾಹುಗಳು, ವೈಶ್ಯರು ತೊಡೆಗಳು ಮತ್ತು ಶೂದ್ರನು ಪಾದ ಎನ್ನುವ ಮಾತು ಬಂದಿದೆ. ಈ ಚತುರ್ವಿಧ (ಚಾತುರ್ವರ್ಣ) ವ್ಯವಸ್ಥೆಯನ್ನು ಹೊಂದಿದವರು ಎಂದರೆ ಹಿಂದೂ ಜನಾಂಗ, ನಮ್ಮ ದೇವರು ಎಂಬುದೇ ಇದರ ಅರ್ಥ"

(ಉಲ್ಲೇಖ : ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 29, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

ಗೋಲ್ವಾಲ್ಕರ್ ಅವರ 'ಸಂವಿಧಾನ' ಅಂದರೆ:

ಹಿಂದೂ ಪರಂಪರೆಯಲ್ಲಿ ಹೆಮ್ಮೆ ಪಡುವವರನ್ನು ಎಲ್ಲೆಲ್ಲೂ ಕಾಣುತ್ತೇವೆ ಎಂದು ಬರೆಯುತ್ತ– "ಫಿಲಿಪೀನ್ಸ್ ನ್ಯಾಯ ಮಂದಿರ ದಲ್ಲಿ ಮನುವಿನ ಅಮೃತಶಿಲೆಯ ವಿಗ್ರಹವಿದೆ. ಅದರ ಕೆಳಗೆ 'ಮಾನವ ಕುಲದ ಸರ್ವ ಪ್ರಥಮ, ಸರ್ವಶ್ರೇಷ್ಠ ಮತ್ತು ಅತ್ಯಂತ ವಿವೇಕಿಯಾದ ಶಾಸನದಾತ' ಎಂದು ಬರೆದಿದೆ" ಎಂದು ಉಲ್ಲೇಖಿಸುತ್ತಾರೆ.

(ಉಲ್ಲೇಖ : ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 12, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

ವಿ.ಡಿ.ಸಾವರ್ಕರ್ ದೃಷ್ಟಿಯಲ್ಲಿ:

"ನಮ್ಮ ಹಿಂದೂ ರಾಷ್ಟ್ರದಲ್ಲಿ ವೇದಗಳ ನಂತರ ಮನುಸ್ಮೃತಿಯೇ ಅತ್ಯಂತ ಪೂಜನೀಯ ಮತಗ್ರಂಥವಾಗಿದೆ. ಪ್ರಾಚೀನ ಕಾಲದಿಂದಲೂ ನಮ್ಮ ಸಂಸ್ಕೃತಿ–ಪದ್ಧತಿಗಳು, ಚಿಂತನೆ ಮತ್ತು ನಡವಳಿಕೆಗಳಿಗೆ ನಿರ್ಣಾಯಕ ತತ್ವ ಅದೇ ಆಗಿದೆ. ಈ ಗ್ರಂಥ ಶತಮಾನಗಳಿಂದಲೂ ನಮ್ಮ ದೇಶದ ಆಧ್ಯಾತ್ಮಿಕ ಹಾಗೂ ದೈವಿಕ ಪಯಣವನ್ನು ಕ್ರೋಢೀಕರಿಸಿ ಸಂಹಿತೆಯಾಗಿಸಿದೆ. ಕೋಟ್ಯಾಂತರ ಹಿಂದುಗಳು ಇಂದಿಗೂ ತಮ್ಮ ಬದುಕು ಹಾಗೂ ನಡೆನುಡಿಗಳಲ್ಲಿ ಅನುಸರಿಸುತ್ತಿರುವ ನೀತಿ ನಿಯಮಗಳಿಗೆ ಮನುಸ್ಮೃತಿಯೇ ಆಧಾರ. ಇವತ್ತು ಮನುಸ್ಮೃತಿಯೇ ಹಿಂದೂ ಕಾಯಿದೆ"

(ಉಲ್ಲೇಖ : ವಿ.ಡಿ.ಸಾವರ್ಕರ್, 'Women in Manusmurithi' Savarkar Samagra, ಸಂಪುಟ 4, ಪ್ರಭಾತ್ ಪ್ರಕಾಶನ, ದೆಹಲಿ.
ಆಯ್ದ ಭಾಗದ ಅನುವಾದ : ಸುರೇಶ್ ಭಟ್, ಬಾಕ್ರಬೈಲು.)

ಅಂಬೇಡ್ಕರ್ ನೇತೃತ್ವದ ಭಾರತದ ಸಂವಿಧಾನದ ಬಗ್ಗೆ ಗೋಲ್ವಾಲ್ಕರ್

"ನಮ್ಮ ಸಂವಿಧಾನವೊ, ಕೆಲವು ಪಾಶ್ಚಾತ್ಯ ರಾಷ್ಟ್ರಗಳಿಂದ ಕೆಲವಾರು ವಿಧಿಗಳನ್ನು ತೆಗೆದು ಸಾಮರಸ್ಯವಿಲ್ಲದೆ ಒಟ್ಟಿಗೆ ತೊಡಕು ತೊಡಕಾಗಿ ತೇಪೆ ಹಾಕಿದ್ದು, ಅಷ್ಟೆ.... ವಿಶ್ವಸಂಸ್ಥೆಯ

ಸನ್ನದಿ (ಚಾರ್ಟರ್) ನಿಂದ ಅಥವಾ ಹಿಂದಿನ ರಾಷ್ಟ್ರಸಂಘದ ಸನ್ನದಿನಿಂದ ಕೆಲವು ಕುಂಟು ತತ್ವಗಳು ಮತ್ತು ಅಮೆರಿಕ ಹಾಗೂ ಬ್ರಿಟನ್ ಸಂವಿಧಾನಗಳ ತೇಪೆ ಕೆಲಸ ಇದು"

(ಉಲ್ಲೇಖ : ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 245, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

ಆರ್‌ಎಸ್‌ಎಸ್‌ನ ಮುಖವಾಣಿ ಆರ್ಗನೈಸರ್‌ನಲ್ಲಿ

"ಭಾರತದ ಹೊಸ ಸಂವಿಧಾನದ ಅತ್ಯಂತ ಕೆಟ್ಟ ಸಂಗತಿ ಏನೆಂದರೆ ಅದರಲ್ಲಿ ಭಾರತೀಯವಾದುದು ಏನೂ ಇಲ್ಲ. ಭಾರತದ ಪುರಾತನ ಸಾಂವಿಧಾನಿಕ ಕಾನೂನುಗಳು, ಸಂಸ್ಥೆಗಳು, ಪರಿಭಾಷೆಗಳ ತುಣುಕೂ ಇದರಲ್ಲಿ ಕಾಣುವುದಿಲ್ಲ. ಸ್ಪಾರ್ಟಾರ ಲೈಕುರ್ಗಸ್ ಅಥವಾ ಪರ್ಷಿಯಾದ ಸೋಲೋನ್‌ಗಿಂತ ಬಹಳ ಹಿಂದೆಯೇ ಮನುವಿನ ಕಾನೂನುಗಳನ್ನು ಬರೆಯಲಾಗಿತ್ತು. ಇಂದಿಗೂ ಮನುಸ್ಮೃತಿಯಲ್ಲಿರುವ ಕಾನೂನುಗಳ ಕುರಿತು ಪ್ರಪಂಚದಲ್ಲಿ ಶ್ಲಾಘಿಸಲಾಗುತ್ತಿದೆ ಮತ್ತು ಅದಕ್ಕೆ ಸ್ವಯಂ ಪ್ರೇರಿತ ವಾದ ವಿಧೇಯತೆ ಹಾಗೂ ಅನುಸರಣೆಯನ್ನು ಕಾಣಬಹುದು. ಆದರೆ ನಮ್ಮ ಸಂವಿಧಾನ ಪಂಡಿತರಿಗೆ ಇವೆಲ್ಲವೂ ನಗಣ್ಯ".

(ನವೆಂಬರ್ 26, 1949ರಂದು ಸಂವಿಧಾನ ರಚನಾ ಸಭೆಯು ಭಾರತದ ಸಂವಿಧಾನವನ್ನು ಅಂಗೀಕರಿಸಿತು. ಆರ್ಗನೈಸರ್‌ನಲ್ಲಿ ನವೆಂಬರ್ 30, 1949 ರಂದು ಪ್ರಕಟ.)

ಒಕ್ಕೂಟ ರಾಜ್ಯದ ಬಗ್ಗೆ

ವಿಷ ಬೀಜ :

"ನಮ್ಮದು ಸಮರಸವಾದ ಏಕರಾಷ್ಟ್ರತ್ವ ಎಂಬ ದೃಢ ನಂಬಿಕೆಯು ನಮ್ಮ ಈಗಿನ ಸಂವಿಧಾನವನ್ನು ರಚಿಸಿದವರ ಮನಸ್ಸಿನಲ್ಲಿಯೂ ಬೇರೂರಿರಲಿಲ್ಲ ಎಂಬುದು ನಮ್ಮ ಒಕ್ಕೂಟ ಸ್ವರೂಪದ ಸಂವಿಧಾನ ರಚನೆಯಿಂದಲೇ ಸ್ಪಷ್ಟ ನಮ್ಮ ದೇಶವನ್ನು 'ರಾಜ್ಯಗಳ ಒಕ್ಕೂಟ' ಎಂದು ಕರೆದಿದ್ದಾರೆ... ಈಗಿನ ಒಕ್ಕೂಟ ರಚನೆಯಲ್ಲಿ ಛಿದ್ರತೆಯ ಬೀಜಗಳು ಅಡಗಿವೆ.

(ಉಲ್ಲೇಖ : ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 229, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

"...ಇದಕ್ಕಾಗಿ ನಮ್ಮ ದೇಶದ ಸಂವಿಧಾನದ ಒಕ್ಕೂಟ ಸ್ವರೂಪದ ಎಲ್ಲ ಮಾತನ್ನು ಆಳವಾಗಿ ಹೂಳಬೇಕು. ಭಾರತ ರಾಜ್ಯದೊಳಗೆ, 'ಸ್ವಯಂ ಅಧಿಕಾರ'ವುಳ್ಳ ಅಥವಾ ಭಾಗಶಃ ಸ್ವಯಂ ಅಧಿಕಾರವುಳ್ಳ ರಾಜ್ಯಗಳ ಅಸ್ತಿತ್ವವನ್ನೇ ಅಳಿಸಿ ಹಾಕಬೇಕು... ಏಕಾತ್ಮಕ ಸರಕಾರದ ಪದ್ಧತಿಯನ್ನು ಸ್ಥಾಪಿಸುವಂತೆ ಸಂವಿಧಾನವನ್ನು ಪುನಃ ಬರೆದಿಡೋಣ"

(ಉಲ್ಲೇಖ: ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 474, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

ಹಿಟ್ಲರ್‌ನ ನಾಜಿ ಮತ್ತು ಫ್ಯಾಸಿಸ್ಟ್ ಸಿದ್ಧಾಂತದ ಬಗ್ಗೆ

"ಇಂದಿನ ಚರ್ಚೆಯ ಪ್ರಧಾನ ವಿಷಯವೆಂದರೆ ಜರ್ಮನರಿಗೆ ತಮ್ಮ ಜನಾಂಗದ ಬಗೆಗಿರುವ ಹೆಮ್ಮೆ. ಜರ್ಮನಿ ತನ್ನ ಜನಾಂಗ ಹಾಗೂ ಸಂಸ್ಕೃತಿಯ ಪರಿಶುದ್ಧತೆಯನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ದೇಶದಲ್ಲಿದ್ದ ಸೆಮಿಟಿಕ್ ಜನಾಂಗದ ಯಹೂದ್ಯರನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಿ ಪ್ರಪಂಚವನ್ನೇ ಬೆಚ್ಚಿ ಬೀಳಿಸಿತು. ಇಲ್ಲಿ ಅತ್ಯುಚ್ಚಮಟ್ಟದ ಜನಾಂಗೀಯ ಅಭಿಮಾನ ತೋರಿ ಬಂದಿದೆ.... ಹಿಂದುಸ್ಥಾನದಲ್ಲಿರುವ ನಾವು ಈ ಉತ್ತಮ ಪಾಠದಿಂದ ಕಲಿಯಬೇಕಾಗಿದೆ ಮತ್ತು ಲಾಭ ಪಡೆಯಬೇಕಾಗಿದೆ.

(ಉಲ್ಲೇಖ : ಗೋಲ್ವಾಲ್ಕರ್ ಅವರ 'We or our nationhood defined; ಭಾರತ್ ಪಬ್ಲಿಕೇಷನ್, ನಾಗಪುರ, 1939, ಪುಟ 35, ಆಯ್ದ ಭಾಗ ಅನುವಾದ : ಸುರೇಶ್ ಭಟ್, ಬಾಕ್ರಬೈಲು)

"ಈ ಪುರಾತನ ದೇಶಗಳು ತಮ್ಮ ಅಲ್ಪಸಂಖ್ಯಾತರ ಸಮಸ್ಯೆಯನ್ನು ಹೇಗೆ ಬಗೆಹರಿಸಿಕೊಳ್ಳುತ್ತವೆ ಎಂಬುದನ್ನು ಮನಸ್ಸಿನಲ್ಲಿರಿಸಿಕೊಳ್ಳುವುದು ತುಂಬಾ ಪ್ರಯೋಜನಕಾರಿ... ಹೊರಗಿನಿಂದ ವಲಸೆ ಬಂದವರು ಜನಸಂಖ್ಯೆಯ ಪ್ರಧಾನ ಗುಂಪಾಗಿರುವ ರಾಷ್ಟ್ರೀಯ ಜನಾಂಗದ ಸಂಸ್ಕೃತಿ ಹಾಗೂ ಭಾಷೆಯನ್ನು ಅಳವಡಿಸಿಕೊಂಡು, ಅದರ ಹಿರಿಯಾಸೆಗಳನ್ನು ಹಂಚಿಕೊಂಡು, ತಮ್ಮ ಪ್ರತ್ಯೇಕ ಅಸ್ತಿತ್ವದ ಅಸ್ಮಿತೆಯನ್ನು ಮತ್ತು ವಿದೇಶಿ ಮೂಲವನ್ನು ಮರೆತು ರಾಷ್ಟ್ರೀಯ ಜನಾಂಗದಲ್ಲಿ ಸ್ವಾಭಾವಿಕವಾಗಿ

ಬೆರೆತುಕೊಳ್ಳಬೇಕಾಗಿದೆ. ಅವರು ಹಾಗೆ ಮಾಡದಿದ್ದಲ್ಲಿ ರಾಷ್ಟ್ರದ ಎಲ್ಲ ನೀತಿ ನಿಯಮ ಮತ್ತು ಸಂಹಿತೆಗಳ ಕಟ್ಟುಪಾಡಿಗೆ ಒಳಗಾಗಿ, ಅದರ ಸಹಿಷ್ಣುತೆಯ ಕೃಪೆಯಲ್ಲಿ ಹಕ್ಕುಗಳಿಲ್ಲದೆ ಹೊರಗಿನವರಂತೆ ಬದುಕಬೇಕಾಗುತ್ತದೆ. ವಿದೇಶಿಯರಿಗಿರುವುದು ಎರಡೇ ಮಾರ್ಗಗಳು, ಒಂದೋ ರಾಷ್ಟ್ರೀಯ ಜನಾಂಗದಲ್ಲಿ ತಮ್ಮನ್ನು ಐಕ್ಯವಾಗಿಸುವುದು ಅಥವಾ ರಾಷ್ಟ್ರೀಯ ಜನಾಂಗದ ಕೃಪಾಶ್ರಯದಲ್ಲಿ ಅದು ಅನುಮತಿಸುವಷ್ಟು ಕಾಲ ಇದ್ದು ಹೇಳಿದಾಕ್ಷಣ ತೊಲಗಿ ಹೋಗುವುದು. ಅದೊಂದೇ ಅಲ್ಪಸಂಖ್ಯಾತರ ಸಮಸ್ಯೆ ಬಗೆಗಿನ ಆರೋಗ್ಯಕರ ನಿಲುವು. ಅದೊಂದೇ ತಾರ್ಕಿಕ ಹಾಗೂ ನೈಜ ಪರಿಹಾರ. ಕೇವಲ ಅದೊಂದರಿಂದಲೇ ರಾಷ್ಟ್ರೀಯ ಜೀವನ ಆರೋಗ್ಯಪೂರ್ಣವಾಗಿಯೂ ನಿರಾತಂಕವಾಗಿಯೂ ಇರುತ್ತದೆ. ಕೇವಲ ಅದೊಂದರಿಂದಲೇ ರಾಷ್ಟ್ರದೊಳಗೊಂದು ರಾಷ್ಟ್ರವಾಗುವ ಕ್ಯಾನ್ಸರ್‌ನ ಅಪಾಯದಿಂದ ರಾಷ್ಟ್ರ ಸುರಕ್ಷಿತವಾಗಿರುತ್ತದೆ"

(ಉಲ್ಲೇಖ : ಗೋಲ್ವಾಲ್ಕರ್ ಅವರ 'We or our nationhood defined; ಭಾರತ್ ಪಬ್ಲಿಕೇಷನ್, ನಾಗಪುರ, 1939, ಪುಟ 47, ಆಯ್ದ ಭಾಗ ಅನುವಾದ : ಸುರೇಶ್ ಭಟ್, ಬಾಕ್ರಬೈಲು)

"ನಾಝಿ ಅಥವಾ ಫ್ಯಾಸಿಸ್ಟ್ ಮಂತ್ರದಂಡ ಮುಟ್ಟಿದ ಪರಿಣಾಮವಾಗಿ ಜರ್ಮನಿ ಅಥವಾ ಇಟಲಿ ಇಷ್ಟೊಂದು ಅದ್ಭುತವಾಗಿ ಸುಸ್ಥಿತಿಗೆ ಮರಳಿ ಹಿಂದೆಂದೂ ಇಲ್ಲದ ರೀತಿಯಲ್ಲಿ ಇಷ್ಟೊಂದು ಬಲಶಾಲಿಯಾಗಿ ಬೆಳೆದಿರುವ ಸತ್ಯವೇ ಆ ರಾಜಕೀಯ ಸಿದ್ಧಾಂತಗಳು ಅವುಗಳ ಆರೋಗ್ಯಕ್ಕೆ

ಅವಶ್ಯವಿದ್ದ ಅತ್ಯಂತ ಹಿತಕರವಾದ ಶಕ್ತಿವರ್ಧಕಗಳೆಂಬುದನ್ನು ಸಾಬೀತುಪಡಿಸುತ್ತವೆ"

(ಉಲ್ಲೇಖ : ವಿ.ಡಿ. ಸಾವರ್ಕರ್, 1940ರಲ್ಲಿ ಮಧುರೆಯಲ್ಲಿ ನಡೆದ ಹಿಂದೂ ಮಹಾಸಭಾದ ಅಧ್ಯಕ್ಷೀಯ ಭಾಷಣದಲ್ಲಿ. ಈ ಆಯ್ದ ಭಾಗದ ಅನುವಾದ : ಸುರೇಶ್ ಭಟ್ ಬಾಕ್ರಬೈಲು)

"ಸ್ವತಂತ್ರ"ತೆ:

"ನಮ್ಮ ರಾಷ್ಟ್ರೀಯ ಜೀವನ ಮೌಲ್ಯವನ್ನು, ಎಂದರೆ ನಮ್ಮ 'ಧರ್ಮ' ಮತ್ತು 'ಸಂಸ್ಕೃತಿ'ಯನ್ನು ರಕ್ಷಿಸಿ ಪ್ರಸಾರ ಮಾಡುವುದೇ 'ಸ್ವತಂತ್ರ'ತೆಯ ಅಸ್ತಿತ್ವಕ್ಕೆ 'ಮೂಲಸ್ಫೂರ್ತಿ' ಎಂಬುದು ನಮ್ಮ ಚಾರಿತ್ರಿಕ ಸಂಪ್ರದಾಯದ ದೃಷ್ಟಿ".

(ಉಲ್ಲೇಖ : ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 425, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು)

ಆರ್.ಎಸ್.ಎಸ್.ಗೆ ಸ್ಫೂರ್ತಿ ಅಂದರೆ...

"ಒಂದು ಧ್ವಜ, ಒಬ್ಬ ನಾಯಕ ಮತ್ತು ಒಂದು ಸಿದ್ಧಾಂತದಿಂದ ಸ್ಫೂರ್ತಿ ಪಡೆಯುತ್ತಿರುವ ಆರ್‌ಎಸ್‌ಎಸ್ ಈ ಮಹಾನ್ ದೇಶದ ಪ್ರತಿಯೊಂದು ಮೂಲೆಯಲ್ಲೂ ಹಿಂದುತ್ವದ ಜ್ಯೋತಿಯನ್ನು ಬೆಳಗಿಸುತ್ತಿದೆ"

(1940ರಲ್ಲಿ ಗೋಲ್ವಾಲ್ಕರ್ ಮದ್ರಾಸ್‌ನಲ್ಲಿ ಉನ್ನತಮಟ್ಟದ 1350 ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಉದ್ದೇಶಿಸಿ ಘೋಷಿಸಿದರು. ಇದು ಫ್ಯಾಸಿಸ್ಟ್ ಮತ್ತು ನಾಜಿ ಸಿದ್ಧಾಂತ)



"ಆರ್‌ಎಸ್‌ಎಸ್ ಪ್ರಾಣ ಎಲ್ಲೆಲ್ಲಿದೆ?" ಚಾಪ್ಟರ್‌ನಲ್ಲಿ ಗೋಲ್ವಾಲ್ಕರ್ ಹಾಗೂ ವಿ.ಡಿ.ಸಾವರ್ಕರ್ ಅವರ ಬರಹಗಳಿಂದ ಕೆಲವೇ ಕೆಲವು ಆಲೋಚನೆಗಳ ವೈಖರಿಗಳನ್ನು ಆಯ್ದು ನೀಡಲಾಗಿದೆ. ಅಲ್ಲಿ ಕೇವಲ ದಾಖಲೆಗಳು ಮಾತ್ರ ಮಾತಾಡಿವೆ. ಹೀಗಿರುವ ಆರ್‌ಎಸ್‌ಎಸ್‌ನ ಆ ಭೂತಕಾಲದ ಪೈಶಾಚಿಕ ನೋಟವನ್ನು, ಉಳಿದವರು ಇರಲಿ, ಯಾವ ಸಂವೇದನಾಶೀಲ ಬ್ರಾಹ್ಮಣರೂ ಒಪ್ಪಲಾರರು.

ಗೋಲ್ವಾಲ್ಕರ್ ತಮ್ಮ ಪುಸ್ತಕಕ್ಕೆ 'ಬಂಚ್ ಆಫ್ ಥಾಟ್ಸ್' ಎಂದು ಹೆಸರಿಟ್ಟಿದ್ದಾರೆ. ಕನ್ನಡ ಅನುವಾದಕ್ಕೆ 'ಚಿಂತನಗಂಗಾ' ಎಂಬ ಹೆಸರಿದೆ. ಇರಲಿ, ಇದರಲ್ಲೇನಾರು 'ಥಾಟ್ಸ್' ಅಥವಾ 'ಚಿಂತನ' ಅನ್ನಿಸಿಕೊಳ್ಳುವುದು ಏನಾದರೂ ಇದೆಯಾ ಎಂದು ನೋಡಿದರೆ, ಕಿಂಚಿತ್ತೂ

ಕಂಡುಬರುವುದಿಲ್ಲ. ಅವರುಗಳಲ್ಲಿ ಇರುವುದು ಕೇವಲ ಮೂರು ಮತ್ತೊಂದು ಅಪಾಯಕಾರಿ ನಂಬಿಕೆಗಳು ಮಾತ್ರವೆ. ಅದೂ ಭೂತಕಾಲದ ಅಪಾಯಕಾರಿ ನಂಬಿಕೆಗಳು. ಮೊದಲನೆಯದಾಗಿ– ಆ 'ಪುರುಷ ಸೂಕ್ತ'ದಲ್ಲಿ ಬರುವ ಸಾಮಾಜಿಕ ವ್ಯವಸ್ಥೆಯೇ ಇವರಿಗೆ ದೇವರು. ಬ್ರಾಹ್ಮಣನು ಶಿರ, ರಾಜನು ಬಾಹುಗಳು, ವೈಶ್ಯನು ತೊಡೆಗಳು, ಶೂದ್ರರು ಪಾದಗಳು ಎಂಬ ಸಾಮಾಜಿಕ ವ್ಯವಸ್ಥೆಯೇ ಆರ್‌ಎಸ್‌ಎಸ್‌ಗೆ ದೇವರು. ಇದನ್ನು ಗೋಲ್ವಾಲ್ಕರ್ 'ಜೀವಂತ ಪರಮಾತ್ಮ' ಎನ್ನುತ್ತಾರೆ. ಈ ನಂಬಿಕೆಯೇ ಆರ್‌ಎಸ್‌ಎಸ್‌ಗೆ ತಳಪಾಯ. ಮತ್ತು ಇದೇ ಅವರಿಗೆ ದೇವರ ಸಾಕ್ಷಾತ್ಕಾರ ಕೂಡ!

ಆಯ್ತು, ಚಾತುರ್ವರ್ಣದ ಒಳಹೊಕ್ಕು ಈ ದೇವರ ಕಾರ್ಯವೈಖರಿ ನೋಡಲು, ನಂನಮ್ಮ ದೇಹದ ಶಿರ, ಬಾಹುಗಳು, ತೊಡೆಗಳು, ಪಾದಗಳನ್ನು ನೋಡಿಕೊಂಡರೆ ಸಾಕು. ದೇಹದ ಶಿರ ಅಂದರೆ ಮಿದುಳು ಅಪ್ಪಣೆ ಮಾಡಿ ದಂತೆ ಬಾಹುಗಳೂ, ತೊಡೆಗಳೂ, ಪಾದಗಳೂ ಸೇವೆ ಮಾಡುತ್ತವೆ. ಇದನ್ನೆ ಸಮಾಜಕ್ಕೆ ಅನ್ವಯಿಸಿದರೆ, ಶಿರವಾದ ಬ್ರಾಹ್ಮಣನ ಆರ್ಡರ್‌ಗೆ ತಕ್ಕಂತೆ ಬಾಹುಗಳಾದ ಕ್ಷತ್ರಿಯ ಆಳ್ವಿಕೆ ನಡೆಸಬೇಕು. ಹಾಗೇನೆ ತೊಡೆಗಳಾದ ವೈಶ್ಯನೂ ವ್ಯಾಪಾರ ಮಾಡಬೇಕು ಮತ್ತು ಪಾದಗಳಾದ ಶೂದ್ರರು

ಎಲ್ಲರಿಗೂ ಸೇವೆ ಮಾಡಬೇಕು. ಇದೇ ಆರ್‌ಎಸ್‌ಎಸ್‌ನ ಸಾಮಾಜಿಕ ನ್ಯಾಯ, ಸಾಮಾಜಿಕ ಸಾಮರಸ್ಯ. ಇದೇ ಇವರ ಜೀವಂತ ಪರಮಾತ್ಮ ಅರ್ಥಾತ್ ದೇವರು!

ಈ ಮೇಲ್ಕಂಡ ದೇವರನ್ನು ಎಳೆಯ ಮಕ್ಕಳ ಮನಸ್ಸಿಗೆ ಎರಕ ಹುಯ್ಯಲು, 'ಚಾತುರ್ವರ್ಣ ನನ್ನಿಂದಲೇ ಸೃಷ್ಟಿಯಾಯ್ತು' ಎಂದು ದೇವರ ಅವತಾರವಾದ ಕೃಷ್ಣನೇ ಹೇಳಿದನೆನ್ನಲಾದ ಭಗವದ್ಗೀತೆಯನ್ನು ಪಠ್ಯ ಮಾಡಲು ಆರ್‌ಎಸ್‌ಎಸ್ ಪರಿವಾರದ ಬಿಜೆಪಿ ಸರ್ಕಾರಗಳ ಆಳ್ವಿಕೆ ಇರುವ ಕಡೆ ಹೊರಟಿದ್ದಾರೆ. ಗೀತೆ ರಚನೆ ಯಾವ ಕಾಲದ್ದು? ಅಥವಾ ಮೂಲ ಪಠ್ಯದಲ್ಲಿ ಕೃಷ್ಣನ ಚಾತುರ್ವರ್ಣದ ಪ್ರಸ್ತಾಪ ಇತ್ತೆ? ಅಥವಾ ಗೀತೆಯೇ ಪ್ರಕ್ಷಿಪ್ತವೆ? ಪ್ರಕ್ಷಿಪ್ತವಾಗಿದ್ದರೆ ಯಾವ ಕಾಲದಲ್ಲಾದ ಪ್ರಕ್ಷಿಪ್ತ?

ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಗೀತೆಯ ಅಧಿಕೃತತೆ ಬಗ್ಗೆ ಮಾತಾಡುತ್ತಾ– "...ಶಂಕರಾಚಾರ್ಯರು ಭಾಷ್ಯವನ್ನು ಬರೆದು ಗೀತೆಯನ್ನು ಪ್ರಸಿದ್ಧ ಮಾಡುವುದಕ್ಕೆ ಮುಂಚೆ ಜನರಿಗೆ ಗೀತೆಯ ವಿಷಯವೇ ಹೆಚ್ಚಾಗಿ ಗೊತ್ತಿರಲಿಲ್ಲ. ಅದಕ್ಕಿಂತಲೂ (ಶಂಕರಾಚಾರ್ಯರಿಗಿಂತಲೂ) ಮುಂಚೆ ಗೀತೆಯ ಮೇಲೆ ಬೋಧಾಯನ ವೃತ್ತಿ ಎಂಬುದೊಂದು ಇತ್ತು ಎಂದು

ಅನೇಕರ ಅಭಿಪ್ರಾಯವಾಗಿದೆ... ಆದರೆ ಬೋಧಾಯನರು ವೇದಾಂತ ಸೂತ್ರಗಳ ಮೇಲೆ ಬರೆದ ಭಾಷ್ಯವು, ನಾನು ಭರತಖಂಡವನ್ನೆಲ್ಲಾ ಸಂಚಾರ ಮಾಡುವಾಗ ಎಲ್ಲೂ ಸಿಕ್ಕಲಿಲ್ಲ... ವೇದಾಂತ ಸೂತ್ರಗಳ ಮೇಲೆ ಬರೆದರೆಂದು ಪ್ರಖ್ಯಾತಿ ಪಡೆದ (ಪುರಾತನ) ಬೋಧಾಯನ ಭಾಷ್ಯವೇ ಅನುಮಾನಾಸ್ಪದ ಕಾರ್ಗತ್ತಲಿನಲ್ಲಿ ಹುದುಗಿರುವಾಗ ಗೀತೆಯ ಮೇಲೆ ಬೋಧಾಯನ ಭಾಷ್ಯವಿತ್ತು ಎಂಬುದನ್ನು ದೃಢಪಡಿಸಲು ಸಾಧ್ಯವೇ ಇಲ್ಲ. ಕೆಲವರು ಶಂಕರಾ ಚಾರ್ಯರೇ ಗೀತೆಯ ಕರ್ತೃವೆಂದೂ ಅದನ್ನು ಅವರು ಮಹಾಭಾರತದಲ್ಲಿ ಸೇರ್ಪಡೆ ಮಾಡಿದರೆಂದೂ ಹೇಳುತ್ತಾರೆ" (ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂಪುಟ 7, ಪುಟ 80, 81, ಶ್ರೀರಾಮಕೃಷ್ಣ ಆಶ್ರಮ ಪ್ರಕಟಣೆ) ಅಂದರೆ, ಚಾತುರ್ವರ್ಣದ ಅಸಮಾನತೆ, ಗುಲಾಮಗಿರಿಗಳನ್ನು ಅಧಿಕೃತ ಗೊಳಿಸಲು ಸ್ವತಃ ಭಗವಂತನೇ ಹೇಳಿದ್ದಾನೆ ಎಂದು ಜನರನ್ನು ನಂಬಿಸಲು ನಂತರದ ದಿನಗಳಲ್ಲಿ ಪ್ರಕ್ಷಿಪ್ತವನ್ನು ಸೇರ್ಪಡೆ ಮಾಡಿದ್ದಾರೆ ಎನ್ನುವುದಕ್ಕೆ ಸ್ವತಃ ವಿವೇಕಾನಂದರೇ ಹೇಳಿರುವ ಈ ನುಡಿಗಳು ಸಾಕಲ್ಲವೆ? ಇದೆಲ್ಲಾ ಆರ್‌ಎಸ್‌ಎಸ್‌ಗೆ ಮುಖ್ಯವಲ್ಲ! ಇವರು ನಂಬಿದ್ದೇ ಚರಿತ್ರೆ, ಇವರು ಹೇಳಿದ್ದೇ ಪುರಾಣ! ಸತ್ಯ ಬೇಕಿಲ್ಲ ಇವರಿಗೆ. ಇವರ ನಂಬಿಕೆಯೇ ಸತ್ಯ. ಇವರ ನಂಬಿಕೆಗಳೇ ವರ್ತಮಾನವಾಗಬೇಕು. ಇವು

ಭಾರತದ ಸಂವಿಧಾನಕ್ಕೆ ಎಷ್ಟು ಧಕ್ಕೆ ತರುತ್ತವೊ, ತಂದಷ್ಟೂ ಇವರಿಗೆ ಅದು ದಿಗ್ವಿಜಯದಂತೆ ಕಾಣಿಸುತ್ತದೆ.

ಹಾಗಾಗಿಯೇ, ಭಾರತದಲ್ಲಿ 'ವಿಶ್ವಮಾನವ'ನಾಗಿ ಹುಟ್ಟಿದ ಮಗುವೊಂದು ಜಾತಿವರ್ಣಗಳಿಂದ ಬಿಗಿದು ಕಟ್ಟಲ್ಪಟ್ಟು ಸಾಯುವವರೆಗೆ ಅಲ್ಲೆ ಬಿದ್ದಿರಬೇಕು ಎಂಬ ಆಶಯದ ಚಾತುರ್ವರ್ಣದ ಈ ಅಲ್ಪ ಹಿಂದೂ ಪ್ರಭೇದಕ್ಕೆ ಅಂಬೇಡ್ಕರ್ ನೇತೃತ್ವದಲ್ಲಿ ರಚಿತವಾದ ಭಾರತದ ಇಂದಿನ ನಾಗರಿಕವಾದ ಮಾನವೀಯ ಸಂವಿಧಾನ ಎಂದರೆ ದುಃಸ್ವಪ್ನ. ಇದು ಇವರಿಗೆ ನಿದ್ದೆಯನ್ನೂ ಕೊಡುತ್ತಿಲ್ಲ. ಭಾರತದ ಇಂದಿನ ಸಂವಿಧಾನವನ್ನು ಧ್ವಂಸ ಮಾಡಲು ಆರ್‌ಎಸ್‌ಎಸ್ ಮತ್ತು ಅದರ ಪರಿವಾರ ಮಾಡಬಾರದ ಕೆಲಸ ಮಾಡುತ್ತಿದೆ. ಆಡಬಾರದ ಆಟ ಆಡುತ್ತಿದೆ. ಒಂದೆರಡಲ್ಲ! ಜೊತೆಗೆ, ನಮ್ಮ ಸಂವಿಧಾನದ ತಳಪಾಯವಾದ, ಭಾರತವು ರಾಜ್ಯಗಳ ಒಕ್ಕೂಟ ವ್ಯವಸ್ಥೆ ಎನ್ನುವುದನ್ನು ಬುಡಮೇಲು ಮಾಡಲು ಆರ್‌ಎಸ್‌ಎಸ್ ಪರಿವಾರ ಸಮರ ಸಾರಿದೆ. ಆರ್‌ಎಸ್‌ಎಸ್‌ಗೆ ಬಹುತ್ವ ಅಂದರೆ ಅವರಿಗೆ ಅದು ಛಿದ್ರತೆ, ವಿಷಬೀಜ. ಗೋಲ್ವಾಲ್ಕರ್ ಅವರು 'ಒಕ್ಕೂಟ ಸ್ವರೂಪದ ಎಲ್ಲಾ ಮಾತನ್ನೂ ಆಳವಾಗಿ ಹೂಳಬೇಕು, ಏಕಾತ್ಮಕ ಸರ್ಕಾರದ ಪದ್ಧತಿಯನ್ನು ಸ್ಥಾಪಿಸುವಂತೆ ಸಂವಿಧಾನವನ್ನು ಪುನಃ

ಬರೆದಿಡೋಣ' ಎಂದು ಹೇಳುತ್ತಾರೆ. ಅಷ್ಟೆ ಅಲ್ಲ, ಒಂದು ಧ್ವಜ, ಒಂದು ರಾಷ್ಟ್ರ ಸಿದ್ಧಾಂತ, ಒಂದು ಜನಾಂಗ, ಒಬ್ಬ ನಾಯಕ ಎಂಬ ಹಿಟ್ಲರ್‌ನ ಸರ್ವಾಧಿಕಾರಿ ಸಿದ್ಧಾಂತವೇ ಇವರ ಆದರ್ಶ.

ನೆನಪಿಸಿಕೊಳ್ಳೋಣ: ಕಾಂಗ್ರೆಸ್‌ನ ಇಂದಿರಾ ಗಾಂಧಿಯವರೂ ಕೂಡ ಅಲ್ಪಕಾಲದವರೆಗೆ ಸರ್ವಾಧಿಕಾರಿಯಾಗಿದ್ದರು. ಇದು ಅಲ್ಪಕಾಲದವರೆಗೆ ಮಾತ್ರ. ಜೊತೆಗೆ ಇಂದಿರಾ ಅವರ ಸರ್ವಾಧಿಕಾರವು ಆಡಳಿತಾತ್ಮಕ ಸರ್ವಾಧಿಕಾರ ಮಾತ್ರ ಆಗಿತ್ತು. ನೆನಪಿಸಿಕೊಳ್ಳೋಣ: ಇಂದಿರಾರ ಆ ಅಲ್ಪಕಾಲದ ಸರ್ವಾಧಿಕಾರದಲ್ಲಿ ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾರಂಗ, ಸ್ವಾಯತ್ತ ಸಂಸ್ಥೆಗಳು ಈಗಿನಷ್ಟು ನಿತ್ರಾಣಗೊಂಡಿರಲಿಲ್ಲ. ಅಂದರೆ, ಇಂದಿನ ಮೋದಿಯವರ ಆಳ್ವಿಕೆಯಲ್ಲಿ ನ್ಯಾಯಾಂಗ, ಕಾರ್ಯಾಂಗ ಹಾಗೂ ಮಾಧ್ಯಮ, ಸ್ವಾಯತ್ತ ಸಂಸ್ಥೆಗಳು ಉಸಿರಾಡಲು ಕಷ್ಟಪಡುತ್ತಿವೆ. ಆರ್‌ಎಸ್‌ಎಸ್‌ನ ಕನಸಿನ ಆಳ್ವಿಕೆಯು ಸಮಾಜದ ಎಲ್ಲಾ ಕ್ಷೇತ್ರಗಳನ್ನು ಕಬ್ಜಾ ಮಾಡಿಕೊಳ್ಳತೊಡಗಿದೆ. ಅಂದರೆ, ಇದು ಪಕ್ಷ, ಸಮಾಜ, ಸಂಸ್ಕೃತಿ, ಆಡಳಿತಾತ್ಮಕ ಎಲ್ಲಕ್ಕೂ ಎಲ್ಲಕ್ಕೂ ಏಕ ನಾಯಕತ್ವವೇ. ಇದು ಸರ್ವ– ಸರ್ವಾಧಿಕಾರ! ಇದನ್ನು ನೆನಪಿಟ್ಟುಕೊಳ್ಳೋಣ.

ಇದೆಲ್ಲಾ ಏತಕ್ಕಾಗಿ? ಚಾತುರ್ವರ್ಣ ಸಾಮಾಜಿಕ ವ್ಯವಸ್ಥೆ ಇರಬಹುದು, ಮನುಧರ್ಮಶಾಸ್ತ್ರದ ಸಂವಿಧಾನ ಇರಬಹುದು, ಹಾಗೆ ಸಂಸ್ಕೃತವನ್ನು ಭಾರತದ ಸಂಪರ್ಕ ಭಾಷೆ ಮಾಡಬೇಕೆನ್ನುವ ಆಶಯವಿರಬಹುದು, ಇವೆಲ್ಲಾ ಸಮಾಧಿ ಅಗೆದು ಭೂತವನ್ನು ಬಡಿದೆಬ್ಬಿಸಿ ಭೂತವನ್ನು ವರ್ತಮಾನಗೊಳಿಸುವ ಹುನ್ನಾರಕ್ಕಾಗಿ ಈ ಎಲ್ಲವೂ. ಹಾಗೇ ಭಾರತಕ್ಕೆ ಸಂಪರ್ಕ ಭಾಷೆಯಾಗಿ "ಸಂಸ್ಕೃತವು ಆ ಸ್ಥಾನವನ್ನು ಪಡೆಯುವವರೆಗೆ ಅನುಕೂಲಕರ ದೃಷ್ಟಿಯಿಂದ ಹಿಂದಿ ಭಾಷೆಗೆ ಆದ್ಯತೆ ನೀಡಬೇಕು" ಎನ್ನುತ್ತಾರೆ ಗೋಲ್ವಾಲ್ಕರ್ ತಮ್ಮ 'ಚಿಂತನಗಂಗಾ' ಪುಸ್ತಕದ 122ನೇ ಪುಟದಲ್ಲಿ! ಇವೆಲ್ಲವೂ ಕೂಡ ಭೂತಚೇಷ್ಟೆಯೇ!

ಇದನ್ನೆಲ್ಲಾ ನೋಡಿದಾಗ, ಇನ್ನು, ಆರ್‌ಎಸ್‌ಎಸ್ ನಂಬಿಕೆಗಳಲ್ಲಿ ಮೂರನೆಯದಾದ– ಆರ್ಯನ್ ಶ್ರೇಷ್ಠ ತಳಿ ಬಗ್ಗೆ! ಇದು ಆರ್‌ಎಸ್‌ಎಸ್‌ನ ಅಂತರಂಗದ ಗೀಳಾಗಿದೆ. ಇದರಲ್ಲೂ ಕೂಡ ಆರ್ಯನ್ ಶ್ರೇಷ್ಠ ತಳಿಯ ಕ್ರೂರ ಸರ್ವಾಧಿಕಾರಿ ಹಿಟ್ಲರ್‌ನೇ ಆರ್‌ಎಸ್‌ಎಸ್‌ಗೆ ಆದರ್ಶ ಪುರುಷ. ಶ್ರೀ ಗೋಲ್ವಾಲ್ಕರ್ ಅವರು ತಳಿವಿಜ್ಞಾನದ ಬಗ್ಗೆ ಹಿಟ್ಲರ್‌ಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸನಾತನ ಭಾರತದಲ್ಲಿ ಆರ್ಯನ್ ತಳಿಯ ಪ್ರಯೋಗ

ಪುರಾತನ ಕಾಲದಿಂದಲೂ ಇದೆ ಅನ್ನುತ್ತಾರೆ. ಶ್ರೀ ಗೋಲ್ವಾಲ್ಕರ್ ಅವರು ಗುಜರಾತ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ– "ಇಂದು ಅಡ್ಡತಳಿ ಕುರಿತ ಪ್ರಯೋಗಗಳನ್ನು ಕೇವಲ ಪ್ರಾಣಿಗಳ ಮೇಲಷ್ಟೆ ಮಾಡಲಾಗುತ್ತಿದೆ. ಅಂತಹುದನ್ನು ಮಾನವರ ಮೇಲೆ ನಡೆಸುವಷ್ಟು ಧೈರ್ಯ ಇಂದಿನ ತಥಾಕಥಿತ ಆಧುನಿಕ ವಿಜ್ಞಾನಿಗೂ ಇಲ್ಲ. ಇವತ್ತು ಒಂದಿಷ್ಟು ಅಡ್ಡತಳಿಗಳು ಕಾಣಸಿಕ್ಕರೆ ಅದಾಗಿರುವುದು ವೈಜ್ಞಾನಿಕ ಪ್ರಯೋಗಗಳ ಫಲವಾಗಿ ಅಲ್ಲ, ಲೈಂಗಿಕ ತೃಷೆಯ ಫಲವಾಗಿ. ನಾವು ಈಗ ಮಾನವ ಅಡ್ಡತಳಿ ಕ್ಷೇತ್ರದಲ್ಲಿ ನಮ್ಮ ಪೂರ್ವಜರು ಮಾಡಿರುವ ಪ್ರಯೋಗಗಳನ್ನು ನೋಡೋಣ. ಮನುಕುಲ ವನ್ನು ಇನ್ನಷ್ಟು ಉತ್ತಮಗೊಳಿಸುವುದಕ್ಕಾಗಿ ಉತ್ತರದ ನಂಬೂದರಿ ಬ್ರಾಹ್ಮಣರನ್ನು ಕೇರಳಕ್ಕೆ ಸ್ಥಳಾಂತರಿಸಲಾಯಿತು. ಬಳಿಕ ನಂಬೂದರಿ ಕುಟುಂಬದ ಗಂಡುಮಕ್ಕಳ ಪೈಕಿ ದೊಡ್ಡವನು ಕೇವಲ ಕೇರಳದ ವೈಶ್ಯ, ಕ್ಷತ್ರಿಯ ಅಥವಾ ಶೂದ್ರ ಸಮುದಾಯದವರ ಮಗಳನ್ನು ಮಾತ್ರ ಮದುವೆ ಯಾಗಬಹುದು ಎಂಬ ನಿಯಮವನ್ನು ವಿಧಿಸಲಾಯಿತು. ಇನ್ನಷ್ಟು ದಿಟ್ಟ ಮತ್ತೊಂದು ನಿಯಮವೆಂದರೆ ಯಾವುದೇ ವರ್ಗಕ್ಕೆ ಸೇರಿದ ವಿವಾಹಿತ ಮಹಿಳೆಯ ಮೊದಲ ಮಗುವಿನ ಅಪ್ಪ ನಂಬೂದರಿ ಬ್ರಾಹ್ಮಣನಾಗಿರಬೇಕು, ನಂತರದ

ಮಕ್ಕಳನ್ನು ಆಕೆ ತನ್ನ ಗಂಡನಿಂದ ಪಡೆಯಬಹುದು. ಇವತ್ತು ಈ ಪ್ರಯೋಗವನ್ನು ಹಾದರವೆಂದು ಕರೆಯಲಾಗುವುದು. ಆದರೆ ಅದು ಹಾದರ ಆಗಿರಲಿಲ್ಲ ಏಕೆಂದರೆ ಅದು ಕೇವಲ ಮೊದಲ ಮಗುವಿಗಷ್ಟೆ ಸೀಮಿತವಾಗಿತ್ತು" – ಹೀಗಿದೆ ಇವರ ಆರ್ಯನ್ ತಳಿವಿಜ್ಞಾನ!

(ಉಲ್ಲೇಖ : ಗೋಲ್ವಾಲ್ಕರ್, ಜನವರಿ 2, 1961ರ ಆರ್‌ಎಸ್‌ಎಸ್ ಮುಖವಾಣಿ ಆರ್ಗನೈಜರ್‌ನಲ್ಲಿ' ಉಲ್ಲೇಖಿತ. ಈ ಆಯ್ದ ಭಾಗದ ಅನುವಾದ: ಸುರೇಶ್ ಭಟ್ ಬಾಕ್ರಬೈಲು)

ಇಲ್ಲೇ ಒಂದು ವಿಡಂಬನೆ ಇದೆ. ಗುಜರಾತ್ ವಿಶ್ವವಿದ್ಯಾನಿಲಯದಲ್ಲಿ ಗೋಲ್ವಾಲ್ಕರ್ ತಮ್ಮ ತಳಿಜ್ಞಾನವನ್ನು ಪ್ರದರ್ಶನ ಮಾಡಿದ ಮೇಲೆ ಅದು ಆರ್‌ಎಸ್‌ಎಸ್‌ನ ಅಧಿಕೃತ ಪತ್ರಿಕೆ ಆರ್ಗನೈಝರ್‌ನಲ್ಲಿ ಪ್ರಕಟವಾದ ಮೇಲೆ ತಾವು ಮಾತನಾಡಿದ್ದನ್ನು ಹಿಂದಕ್ಕೆ ತೆಗೆದುಕೊಂಡುಬಿಟ್ಟರು! ಅಷ್ಟರಲ್ಲಾಗಲೇ ಅದು ಪ್ರಕಟವಾಗಿ ದಾಖಲೆಯಾಗಿ ಉಳಿದುಬಿಟ್ಟಿತ್ತು. ಇದು ಚರಿತ್ರೆಯಲ್ಲಿ ಸಂಭವಿಸಿದೆಯೊ ಅಥವಾ ಮಿಥ್ಯೆಯೊ ಎಂಬ ಪ್ರಶ್ನೆ ಬಂತು. ಗೋಲ್ವಾಲ್ಕರ್ ತಮ್ಮ ಮಾತುಗಳನ್ನು ಹಿಂದಕ್ಕೆ ತೆಗೆದುಕೊಂಡರು ಅಂದರೆ ಅದು ಮಿಥ್ಯಾ ಕಟ್ಟುಕತೆಯೆ! ಆದರೆ ಗೋಲ್ವಾಲ್ಕರ್ ಅದನ್ನು ನಿರೂಪಿಸುವಾಗ ಕಣ್ಣಿಗೆ ಕಟ್ಟುವಂತೆ ಖಚಿತವಾಗಿ ನಿರೂಪಿಸಿದರು. ಖುದ್ದು ತಾವೇ ನೋಡಿದಂತೆ ಬಣ್ಣಿಸಿದರು.

ಈ ಗೋಲ್ವಾಲ್ಕರ್ ನಿರೂಪಣಾ ಶೈಲಿ (Narratives) ಇದೆಯಲ್ಲಾ ಅದು ಬಿತ್ತನೆ ಬೀಜವಾಗಿ ಈ ಮಿಥ್ಯಾ ಕಳೆ ಎಲ್ಲೆಲ್ಲೂ ಬೆಳೆಯುತ್ತಿದೆ. ವಾಸ್ತವ ತನಿಖೆಯಾಗುವವರೆಗೆ ಜೀವಿಸಿದಷ್ಟು ಕಾಲ ಇರಲಿ ಎಂದು ದಿನದಿನಕ್ಕೂ ವಾಟ್ಸ್‌ಆಪ್, ಫೇಸ್‌ಬುಕ್, ಸುದ್ದಿ ಮಾಧ್ಯಮಗಳಲ್ಲಿ, ಮಾತುಕತೆಯಲ್ಲಿ ಈ ಸುಳ್ಳಿನ ಕಳೆ ಭಾರತದ ಉದ್ದಗಲಕ್ಕೂ ಬೆಳೆಯುತ್ತಿದೆ. ಈ ಕತೆಕಟ್ಟಿ ಹೇಳುವ ಸುಳ್ಳಿನ ಕಳೆಯ ಬಿತ್ತನೆ ಶ್ರೀ ಗೋಲ್ವಾಲ್ಕರ್ ಅವರ ಕಾಣಿಕೆ! ಆರ್‌ಎಸ್‌ಎಸ್ ಮತ್ತು ಅದರ ಪರಿವಾರದಿಂದ ಈ ಸುಳ್ಳಿನ ಬಿತ್ತನೆ ನಿರಂತರ ನಡೆಯುತ್ತಿದೆ, ನಿರಂತರ.

ಜೊತೆಗೆ, ಭಾರತದಲ್ಲಿ ಹುಟ್ಟಿದ ಜೈನ, ಬೌದ್ಧ, ಸಿಖ್, ಲಿಂಗಾಯತ ಮುಂತಾದ ಚಾತುರ್ವರ್ಣ ನಿರಾಕರಿಸುವ ಧರ್ಮಗಳ ಹಲ್ಲು ಉಗುರು ಕಿತ್ತು, ಚಾತುರ್ವರ್ಣ ಪದ್ಧತಿಗೆ ಧಕ್ಕೆಯಾಗದಂತೆ ಉಳಿಸಿಕೊಳ್ಳಲು ಆರ್‌ಎಸ್‌ಎಸ್ ನೋಡುತ್ತದೆ. ಅಂದರೆ ಇದು ನಮ್ಮದೇ ಎಂದು ಈ ಚಾತುರ್ವರ್ಣದೊಳಗೆ 'ಸ್ವಾಹಾ' ಮಾಡುತ್ತದೆ. ಇನ್ನೊಂದು ಕಡೆ, ಚಾತುರ್ವರ್ಣದ ಹಿಂದೂ ಪ್ರಭೇದಕ್ಕೆ ಸ್ವಾಹಾ ಆಗದ ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳ ಸದೆ ಬಡಿಯಲು ತನ್ನ ಪರಿವಾರವನ್ನು ಛೂ ಬಿಟ್ಟು ದಾಳಿ ಮಾಡಿಸುತ್ತದೆ.

ಈ ದಾಳಿಗಳು ಥರಾವರಿ. ಅದಕ್ಕೆ ನಾನಾ ವೇಷ. ಇದು ಈಗ ಮಾತ್ರ ನಡೆಯುತ್ತಿರುವುದಲ್ಲ. ಅದರ ಹುಟ್ಟಲ್ಲೆ ವೇಷ ಕಟ್ಟಿ ವಂಚಿಸುವ ಆಟವೂ ಹುಟ್ಟಿರಬೇಕು!

ಇದಕ್ಕೊಂದು ಉದಾಹರಣೆ: 1948 ಮಾರ್ಚ್ 14ರಂದು, ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಪ್ರಧಾನಿ ನೆಹರೂ ಹಾಗೂ ಗೃಹ ಸಚಿವ ಸರ್ದಾರ್ ವಲ್ಲಭಾಯ್ ಪಟೇಲರಿಗೆ ಬರೆದ ಪತ್ರದಲ್ಲಿ– "ಆರ್‌ಎಸ್‌ಎಸ್ ಮಂದಿ ಗಲಭೆ ಸೃಷ್ಟಿಸುವ ಯೋಜನೆಯೊಂದನ್ನು ಹಾಕಿಕೊಂಡಿದ್ದಾರೆಂದು ನನಗೆ ತಿಳಿಸಲಾಗಿದೆ. ಅವರು ಹಲವಾರು ಮಂದಿಗೆ ಮುಸ್ಲಿಮರ ವೇಷ ತೊಡಿಸಿ ಮುಸ್ಲಿಮರ ಹಾಗೆ ಕಾಣುವಂತೆ ಮಾಡಿದ್ದಾರೆ. ಇವರಿಗೆ ಹಿಂದೂಗಳ ಮೇಲೆ ದಾಳಿ ನಡೆಸಿ ಗಲಭೆ ಹುಟ್ಟು ಹಾಕಿ ಹಿಂದೂಗಳನ್ನು ಕೆರಳಿಸುವ ಕಾರ್ಯವನ್ನು ವಹಿಸಲಾಗಿದೆ. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಪ್ರೇರಿತ ಹಿಂದೂಗಳು ಮುಸ್ಲಿಮರ ಮೇಲೆ ದಾಳಿ ನಡೆಸಿ ಅವರನ್ನೂ ಕೆರಳಿಸಲಿದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯದ ಈ ತೆರನಾದ ಗಲಭೆ ಒಂದು ದಳ್ಳುರಿಯನ್ನು ಹುಟ್ಟುಹಾಕಲಿದೆ" ಎಂದು ಎಚ್ಚರಿಸುತ್ತಾರೆ. ಆ ಕಾಲದಲ್ಲೇ ಇಷ್ಟು, ಈ ಕಾಲದಲ್ಲಿ ಇನ್ನೆಷ್ಟೊ? ಇನ್ನೆಷ್ಟು ವೇಷಗಳೋ!

ಆರ್‌ಎಸ್‌ಎಸ್ ಮತ್ತು ಅದರ ಸಂತಾನಗಳು ಹೇಗೆ ಸುಳ್ಳು ಸೃಷ್ಟಿಸುತ್ತಾರೆನ್ನುವುದಕ್ಕೆ ಇದಕ್ಕೊಂದು ಒಳ್ಳೆಯ ಉದಾಹರಣೆ: ಟಿಪ್ಪು ಸುಲ್ತಾನ್ ಬಗ್ಗೆ ಮಾಡುತ್ತಿರುವ ಅಪಪ್ರಚಾರ. ನೋಡಿ, ಟಿಪ್ಪು ಆಳ್ವಿಕೆ ಕಾಲ 1782ರಿಂದ 1799 ಇಸವಿವರೆಗೆ. ಟಿಪ್ಪು ತನ್ನ ಆಳ್ವಿಕೆಯ ಕಾಲದಲ್ಲಿ ಕೊಡಗಿನಲ್ಲಿ 69 ಸಾವಿರ ಹಿಂದೂ ಜನರನ್ನು ಇಸ್ಲಾಂಗೆ ಮತಾಂತರ ಮಾಡಿದ್ದಾನೆಂದು ಸಂಘಪರಿವಾರದ ಆರ್‌ಎಸ್‌ಎಸ್ ಚಿಂತಕರು ವಾದ ಮಾಡುತ್ತಾರೆ. ಗೆಜೆಟಿಯರ್ ಜನಸಂಖ್ಯಾ ಲೆಕ್ಕದ ಪ್ರಕಾರ ಹೇಗೇ ಲೆಕ್ಕ ಹಾಕಿದರೂ ಆಗ ಕೊಡಗು ಪ್ರಾಂತ್ಯದ ಒಟ್ಟು ಜನಸಂಖ್ಯೆಯೇ 69 ಸಾವಿರದ ಗಡಿ ದಾಟುವುದೇ ಇಲ್ಲ. ಆರ್‌ಎಸ್‌ಎಸ್ ಚಿಂತಕರ ವಾದದಂತಾಗಿದ್ದರೆ ಇಂದು ಕೊಡಗಿನಲ್ಲಿ ಸಂಪೂರ್ಣ ಮುಸ್ಲಿಮರೇ ಇರಬೇಕಾಗಿತ್ತಲ್ಲವೆ? ಆದರೆ, ಇಂದು ಕೊಡಗಲ್ಲಿ ಮುಸ್ಲಿಮರು ಇರುವುದು ಶೇಕಡ 15ರಷ್ಟು ಮಾತ್ರ. ಅಂದರೆ ಟಿಪ್ಪುವಿನ ಈ ಹಿಂದೂ ದ್ವೇಷದ ಕತೆ ಸುಳ್ಳು ಬಿತ್ತನೆ. ದುರಂತವೆಂದರೆ ಈ ಕಳೆ ಬೆಳೆಯುತ್ತಿದೆ ಕೂಡ. ಆರ್‌ಎಸ್‌ಎಸ್ ಮತ್ತು ಅದರ ಸಂಘ ಪರಿವಾರ ಅದರ ಫಸಲು ತೆಗೆದುಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದಾಗ, ಇವರೊಳಗೆ ಯಾವ ದೇವರೂ ಇಲ್ಲ. ಸುಳ್ಳೆ ಇವರ ಮನೆ ದೈವ. ಸುಳ್ಳು ಉತ್ಪಾದಕರಾದ ಇವರು ತಮ್ಮ ಆತ್ಮಸಾಕ್ಷಿಯನ್ನೇ ನೇಣು ಹಾಕಿಬಿಟ್ಟಿದ್ದಾರೆ ಅನ್ನಿಸುತ್ತದೆ!

ಆರ್‌ಎಸ್‌ಎಸ್‌ನ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳ ದ್ವೇಷಕ್ಕೆ ಅವು ಚಾತುರ್ವರ್ಣದ ಸಾಮಾಜಿಕ ಪದ್ಧತಿಯೊಳಗೆ ಕರಗುವುದಿಲ್ಲ ಎನ್ನುವುದೇ ಮುಖ್ಯ ಕಾರಣವಾಗಿದೆ. ಈ ಎರಡೂ ಧರ್ಮಗಳೂ ಚಾತುರ್ವರ್ಣದ ಹಿಂದೂ ಮತಕ್ಕೆ ನುಂಗಲಾರದ ತುತ್ತಾಗಿವೆ. ಶತಾಯ ಗತಾಯ ಅವುಗಳನ್ನು ಬಗ್ಗಿಸಬೇಕು ಜೊತೆಗೆ ಭಾರತದಲ್ಲಿ ಅವು ಯಾವ ಹಕ್ಕೂ ಇಲ್ಲದೆ ಸತ್ತಂತೆ ಇರಬೇಕು ಎನ್ನುವುದೇ ಆರ್‌ಎಸ್‌ಎಸ್‌ನ ಧೋರಣೆಯಾಗಿದೆ. ಗೋಲ್ವಾಲ್ಕರ್ ಇದನ್ನು 'We or our nationhood defined' ಪುಸ್ತಕದ ಪುಟ 47ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ– "...(ಹೊರಗಿನಿಂದ ವಲಸೆ ಬಂದವರಾದ ಅಲ್ಪಸಂಖ್ಯಾತರು) ತಮ್ಮ ಪ್ರತ್ಯೇಕ ಅಸ್ತಿತ್ವದ ಅಸ್ಮಿತೆಯನ್ನು ಮತ್ತು ವಿದೇಶಿ ಮೂಲವನ್ನು ಮರೆತು ರಾಷ್ಟ್ರೀಯ ಜನಾಂಗದಲ್ಲಿ ಸ್ವಾಭಾವಿಕವಾಗಿ ಬೆರೆತುಕೊಳ್ಳಬೇಕಾಗಿದೆ... ವಿದೇಶಿಯರಿಗೆ ಇರುವುದು ಎರಡೇ ಮಾರ್ಗಗಳು. ಒಂದೋ ರಾಷ್ಟ್ರೀಯ ಜನಾಂಗದಲ್ಲಿ ತಮ್ಮನ್ನು ಐಕ್ಯವಾಗಿಸುವುದು ಅಥವಾ ರಾಷ್ಟ್ರೀಯ ಜನಾಂಗದ ಕೃಪಾಶ್ರಯದಲ್ಲಿ ಅದು ಅನುಮತಿಸುವಷ್ಟು ಕಾಲ ಇದ್ದು ಹೇಳಿದಾಕ್ಷಣ ತೊಲಗಿಹೋಗುವುದು..." ಹೀಗಿದೆ ಇವರ ಹಿಟ್ಲರ್‌ನ ಜನಾಂಗೀಯವಾದದ ಕೇವಲ ನಕಲು ದೃಷ್ಟಿಕೋನ.

ಆಯ್ತು, ನಿಜಾಂಶ ನೋಡುವುದಾದರೆ, ಭಾರತದಲ್ಲಿರುವ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಎಲ್ಲರೂ ವಿದೇಶದಿಂದ ಬಂದವರಾಗಿದ್ದಾರೆಯೇ? ಚಾತುರ್ವರ್ಣ ಮತ್ತು ಜಾತಿಪದ್ಧತಿಗೆ ನಲುಗಿ ಹಿಂದೂ ಸಮುದಾಯಗಳಿಂದ ಮತಾಂತರವಾದವರೇ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಧರ್ಮಗಳಲ್ಲಿ ಇದ್ದಾರಲ್ಲವೆ? ಹಾಗೂ ಭಾರತಕ್ಕೆ ಇಸ್ಲಾಂ ಆಗಮಿಸಿದ ಆರಂಭಿಕ ಕಾಲಘಟ್ಟದಲ್ಲಿ ಅಧಿಕಾರಕ್ಕೊ, ಮಂತ್ರಿಸ್ಥಾನ, ಮಿಲಿಟರಿಯಲ್ಲಿ ಸ್ಥಾನಮಾನ ಪ್ರತಿಷ್ಠೆಗೊ ಆಮಿಷಕ್ಕೊ ತುತ್ತಾಗಿ ಮೊದಲು ಮತಾಂತರವಾದವರು ಹೆಚ್ಚಾಗಿ ಉತ್ತರ ಭಾರತದ ಆರ್ಯನ್ ಬ್ರಾಹ್ಮಣರಲ್ಲವೆ?

(ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಅವರ ಪುಸ್ತಕದಿಂದ)

ಆರ್‌ಎಸ್‌ಎಸ್ ದ್ವೇಷಿಸುವ ಪಾಕಿಸ್ತಾನದಲ್ಲಿ ಇರುವ ಮುಸ್ಲಿಮರಲ್ಲಿ ಈ ಆರ್ಯನ್ ಬ್ರಾಹ್ಮಣ ಮತಾಂತರಿಗಳು ಇಲ್ಲವೆ? ಈ ನಿಜಾಂಶಗಳ್ಯಾವುವೂ ಇವರಿಗೆ ಬೇಕಿಲ್ಲ. ಈ ಚಾತುರ್ವರ್ಣದ ಹಿಂದೂ ಪ್ರಭೇದದ ಆರ್‌ಎಸ್‌ಎಸ್, ತಾನೇ ವಿಶಾಲ ಬಹುಸಂಖ್ಯಾತ ಹಿಂದೂ ಧರ್ಮದ ಪ್ರತಿನಿಧಿ ಎಂಬಂತೆ ವರ್ತಿಸುತ್ತಾ ಉಳಿದೆಲ್ಲಾ ಬಹುಸಂಖ್ಯಾತ ಉದಾರ ಹಿಂದೂ ಸಮುದಾಯಗಳನ್ನು ಭ್ರಮೆಗೊಳಪಡಿಸಿ, ದ್ವೇಷ ತುಂಬಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಸಲುವಾಗಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ವಿರುದ್ಧ ದ್ವೇಷದ ಸಮರ ಸಾರಿದೆ.

ಇವರಿಗೆ ದ್ವೇಷದ ಸಮರ ಬೇಕು. ಈ ಸಮರದಲ್ಲಿ ದ್ವೇಷಕ್ಕೆ ಬಲಿಯಾಗಿ ಭಾಗವಹಿಸುವ ಅಸಂಖ್ಯ ಜಾತಿ-ಪಂಥಗಳ ಬಹುಸಂಖ್ಯಾತ ಮಾಜಿ ಶೂದ್ರರ ರೆಕ್ಕೆಗಳು ಸದ್ದಿಲ್ಲದೆ ಕತ್ತರಿಸಲ್ಪಡುತ್ತದೆ. ದ್ವೇಷದ ಸಮರದಲ್ಲಿ ಈ ಮಾಜಿ ಶೂದ್ರರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತದೆ. ಹೇಗೆಂದರೆ, ಎಸ್‌ಸಿ/ಎಸ್‌ಟಿ/ಹಿಂದುಳಿದ ವರ್ಗಗಳಿಗೆ ಅವರವರ ಜಾತಿ ಜನಾಂಗಗಳ ಆಸ್ಮಿತೆಯು ಇದ್ದ ಕಾರಣದಿಂದಲೇ ಅವರು ಶಿಕ್ಷಣ, ಉದ್ಯೋಗ, ರಾಜಕೀಯದಲ್ಲಿ ತಮ್ಮ ಸಂವಿಧಾನಾತ್ಮಕ ಹಕ್ಕು ಕೇಳುತ್ತಿದ್ದರು, ತಂತಮ್ಮ ಪಾಲು ಕೇಳುತ್ತಿದ್ದರು, ಸಂಘಟಿತರಾಗಿ ಹೋರಾಡುತ್ತಿದ್ದರು. ಆದರೆ, ಯಾವಾಗ ಹಿಂದೂ-ಮುಸ್ಲಿಮ್ ದ್ವೇಷದ ಸಮರದ ಕುಲುಮೆಯಲ್ಲಿ ಈ ಮಾಜಿ ಶೂದ್ರರು ತಾವೂ ಹಿಂದೂಗಳೆಂದು ಭಾಗವಹಿಸುತ್ತಾರೊ ಆವಾಗ, 'ಹಿಂದೂ ಒಂದು' ಅಸ್ಮಿತೆಯಲ್ಲಿ ವಂಚಿತ ಸಮುದಾಯಗಳ ಸಂವಿಧಾನಾತ್ಮಕ ಹಕ್ಕುಗಳು ಮಸುಕಾಗಿ ಬಿಡುತ್ತದೆ. ಅಲ್ಲ ಚಾತುರ್ವರ್ಣದ ಹಿಂದೂ ಮತದ ಬಲೆಗೆ ಎಲ್ಲರೂ ಸಿಲುಕಿಕೊಂಡಂತಾಗಿ ಇದರ ಫಲಿತಾಂಶ ಏನೆಂದರೆ, ಶಿರವಾದ ಬ್ರಾಹ್ಮಣ ಅಪ್ಪಣೆ ಕೊಡಿಸಿದಂತೆ ಬಾಹುಗಳಾದ ಕ್ಷತ್ರಿಯ ಆಳ್ವಿಕೆ ಮಾಡಬೇಕಾಗುತ್ತದೆ, ತೊಡೆಗಳಾದ ವೈಶ್ಯ ವ್ಯಾಪಾರ ಮಾಡಬೇಕಾಗುತ್ತದೆ, ಹಾಗೂ ಪಾದಗಳಾದ ಶೂದ್ರರು ತಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು

ಕಳೆದುಕೊಂಡು ತಮ್ಮ ಪೂರ್ವಜರಂತೆ ಮೇಲಿನವರ ಸೇವೆ ಮಾಡುತ್ತ ತೆವಳುತ್ತಾ ಇರಬೇಕಾಗುತ್ತದೆ. ಆಗ ಭಾರತ ಭೂತಕಾಲಕ್ಕೆ ಹಿಂಚಲಿಸಿದಂತಾಗುತ್ತದೆ.

(ಆಧಾರ: ಡಾ. ಶಿವಕುಮಾರ್, ಭಾರತೀಯ ಪರಿವರ್ತನಾ ಸಂಘ)

ಹೀಗೆ ಆರ್‌ಎಸ್‌ಎಸ್‌ನ ಒಳಹೊಕ್ಕು ನೋಡುವಾಗ, ಅದರೊಳಗೆ ಇನ್ನೊಂದೆರಡು ಅಂಶಗಳನ್ನು ಗಮನಿಸಬೇಕಾಗಿದೆ. ಭೂತಗಳನ್ನು ಸಮಾಧಿಯಿಂದ ಬಡಿದೆಬ್ಬಿಸಿ ಅವುಗಳನ್ನು ವರ್ತಮಾನ ಮಾಡಲು ಹೊರಟಿರುವ ಆರ್‌ಎಸ್‌ಎಸ್ ಒಂಟಿ ಸಂಘಟನೆಯಲ್ಲ. ಅದು ಬಡಿದೆಬ್ಬಿಸಿದ ಮರಿ ಸಂತಾನಗಳೂ ಉಂಟು. ಆರ್‌ಎಸ್‌ಎಸ್‌ನ ಪ್ರಧಾನ ಪ್ರಕಾಶನ ಸಂಸ್ಥೆ, ಸುರುಚಿ ಪ್ರಕಾಶನ 1997ರಲ್ಲಿ ಪ್ರಕಟಿಸಿರುವ 'ಪರಮ್ ವೈಭವ್ ಕೆ ಪಥ್ ಪರ್' ಪುಸ್ತಕದಲ್ಲಿ ಇದೆಲ್ಲಾ ವಿವರವಾಗಿದೆ. ಈ ಆರ್‌ಎಸ್‌ಎಸ್ ಸಂತಾನಗಳಲ್ಲಿ ಬಿಜೆಪಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ಹಿಂದೂ ಜಾಗರಣ್ ಮಂಚ್, ಸಂಸ್ಕಾರ ಭಾರತಿ, ವಿಶ್ವ ಹಿಂದು ಪರಿಷತ್, ಬಜರಂಗದಳ ಇತ್ಯಾದಿ ಸುಮಾರು 40 ಮರಿ ಸಂಘಟನೆಗಳ ಉಲ್ಲೇಖವಿದೆ. ಈ ಲೆಕ್ಕವು 1996ರ ತನಕ ಮಾತ್ರ. ಇವುಗಳು ಇನ್ನೆಷ್ಟು ಮರಿ ಹಾಕಿವೆಯೋ ಗೊತ್ತಿಲ್ಲ. 'ಧರಮ್ ಸಂಸದ್' ಎಂಬ ಕೂಟದ ಗುಂಪೂ ಆರ್‌ಎಸ್‌ಎಸ್‌ನ ಸಂಚಲ್ಲೆ ಬರುತ್ತದೆ. ಕರ್ನಾಟಕದ ಭಜರಂಗದಳದ ಕೂಸು ಶ್ರೀರಾಮ

ಸೇನೆಯೂ ಅದರಲ್ಲೊಂದು. ಇವೆಲ್ಲವೂ ಆರ್‌ಎಸ್‌ಎಸ್‌ನ ಬಂಧುಬಳಗ. ಈ ಮರಿ ಸಂಘಟನೆಗಳು ತಮ್ಮ ದಾಂಧಲೆಯಿಂದ ಕೆಟ್ಟ ಹೆಸರು ಪಡೆದುಕೊಂಡಾಗ ತನಗೂ ಅವಕ್ಕೂ ಸಂಬಂಧವಿಲ್ಲ ಎಂದು ಆರ್‌ಎಸ್‌ಎಸ್ ಬಾಯಲ್ಲಿ ಹೇಳುವ ಪರಿಪಾಠವಿದೆ! ಆದರೆ ನಾವು ಮೋಸ ಹೋಗಬಾರದು! ಮರೆಯಲೂ ಬಾರದು! ಇವುಗಳಿಗೂ ಆರ್‌ಎಸ್‌ಎಸ್‌ಗೂ ಕರುಳಬಳ್ಳಿ ಸಂಬಂಧವೆ ಇರುವುದು.

ಎಲ್ಲಕ್ಕಿಂತ ದಾರುಣವಾದುದೆಂದರೆ, ಆರ್‌ಎಸ್‌ಎಸ್ ತನ್ನ ತೆಕ್ಕೆಗೆ ಬರುವ ಸ್ವಯಂಸೇವಕರನ್ನು ಪಳಗಿಸುವ ವೈಖರಿ. ಗೋಲ್ವಾಲ್ಕರ್ ಹೇಳುತ್ತಾರೆ:

"ನಾವು ಸಂಘಟನೆಯೊಂದರ ಭಾಗವೆಂದು ಹೇಳಿ ಅದರ ಶಿಸ್ತನ್ನು ಒಪ್ಪಿದಾಗ ಜೀವನದಲ್ಲಿ ಆಯ್ಕೆಗಳ ಪ್ರಶ್ನೆ ಇರುವುದಿಲ್ಲ. ಹೇಳಿದಂತೆ ಮಾಡಿ. ಕಬಡ್ಡಿ ಆಡಲು ಹೇಳಿದರೆ ಕಬಡ್ಡಿ ಆಡಿ. ಸಭೆ ನಡೆಸಬೇಕೆಂದು ಹೇಳಿದರೆ ಸಭೆ ನಡೆಸಿ... ಉದಾಹರಣೆಗೆ ನಮ್ಮ ಕೆಲವು ಮಿತ್ರರಿಗೆ ರಾಜಕೀಯದಲ್ಲಿ ಕೆಲಸ ಮಾಡುವಂತೆ ಹೇಳಲಾಯಿತು. ಇದರರ್ಥ ಅವರಿಗೆ ರಾಜಕೀಯದಲ್ಲಿ ಭಾರೀ ಆಸಕ್ತಿ ಇದೆ ಅಥವಾ ಪ್ರೇರೇಪಣೆ ಇದೆ ಎಂದಲ್ಲ. ಅವರು ರಾಜಕೀಯಕ್ಕಾಗಿ ನೀರಿಲ್ಲದ ಮೀನಿನಂತೆ ಪ್ರಾಣತ್ಯಾಗ ಮಾಡುವುದಿಲ್ಲ. ರಾಜಕೀಯದಿಂದ

ಹೊರಬರುವಂತೆ ಹೇಳಿದರೆ ಅದಕ್ಕೂ ಅವರ ಆಕ್ಷೇಪವಿಲ್ಲ. ಅವರ ವಿವೇಚನಾಶಕ್ತಿ ಬೇಕಾಗಿಯೇ ಇಲ್ಲ."

(ಗೋಲ್ವಾಲ್ಕರ್ ಅವರು ಮಾರ್ಚ್ 16, 1954ರಂದು ವಾರ್ಧಾದ ಸಿಂಡಿಯಲ್ಲಿ ಮಾಡಿದ ಭಾಷಣದಿಂದ)

ಇಲ್ಲಿ ಗೋಲ್ವಾಲ್ಕರ್, ವಿವೇಚನಾಶಕ್ತಿ ಬೇಕಾಗಿಯೇ ಇಲ್ಲ ಅನ್ನುತ್ತಾರೆ. ಇಲ್ಲಿ ಆಯ್ಕೆ ಪ್ರಶ್ನೆಗಳೂ ಇಲ್ಲ ಅನ್ನುತ್ತಾರೆ. ಇಲ್ಲಿ ಸಂಕಟ ಯಾಕೆಂದರೆ ಎಳೆ ಮಕ್ಕಳನ್ನು ಹಿಡಿದು ಹಿಡಿದು ತಂದು ಸಂಘಟನೆಯ ಭಾಗ ಮಾಡುತ್ತಿದ್ದಾರೆ. ಇವರು ಮನುಷ್ಯರನ್ನು ಮಾಡುತ್ತಿಲ್ಲ. ಸ್ವಯಂಸೇವಕ ಎಂಬ ಅಮಾನವೀಯ ರೋಬೋಟ್‌ಗಳನ್ನು ತಯಾರಿಸುತ್ತಿದ್ದಾರೆ. ಆರ್‌ಎಸ್‌ಎಸ್ ದವಡೆಗೆ ಸಿಲುಕುವ ಮಕ್ಕಳನ್ನು ಕಾಪಾಡುವುದು ಹೇಗೆ?

ವಿಶಾಲವಾದ ಹಿಂದು ಸಮಾಜದಲ್ಲಿ ಇರುವ ಅಲ್ಪಸಂಖ್ಯಾತವಾದ ಈ ಗೋಮುಖ ವ್ಯಾಘ್ರದಂತಹ 'ಚಾತುರ್ವರ್ಣದ ಹಿಂದೂ ಪ್ರಭೇದ'ದ ಇಂಥೆಲ್ಲಾ ಅಮಾನುಷ ಕೃತ್ಯಗಳನ್ನು ನೋಡಿಕೊಂಡು ಸುಮ್ಮನಿರದೆ, ವಿಶಾಲ ಹಿಂದೂ ಸಮಾಜ ಈ ಸಂಕಷ್ಟ ಕಾಲದಲ್ಲಿ ಮಾತಾಡಬೇಕಿದೆ. ಆದಿವಾಸಿಗಳಾದಿಯಾಗಿ ಬ್ರಾಹ್ಮಣರನ್ನೂ ಒಳಗೊಂಡಂತೆ ಸಕಲೆಂಟು ಜಾತಿಗಳ ಬಹುಸಂಖ್ಯಾತ ಮಾನವೀಯ ಹಿಂದೂ ಸಮಾಜ ಕ್ರಿಯಾಶೀಲವಾಗಬೇಕಿದೆ.

೩

ಇಂದು, ವರ್ತಮಾನದಲ್ಲಿ...

ಇಂದು, ವರ್ತಮಾನದಲ್ಲಿ ಆರ್‌ಎಸ್‌ಎಸ್ ಸಂತಾನಗಳಲ್ಲಿ ಒಂದಾದ ಬಿಜೆಪಿಯು ಕೇಂದ್ರದಲ್ಲೂ, ಕೆಲವು ರಾಜ್ಯಗಳಲ್ಲೂ ಅಧಿಕಾರದ ಚುಕ್ಕಾಣಿ ಹಿಡಿದಿದೆ. ನಮ್ಮ ಕರ್ನಾಟಕದಲ್ಲೂ ಅಂತು ಇಂತು ಎಂತೊ ಒಟ್ಟಿನಲ್ಲಿ ಅಧಿಕಾರ ಹಿಡಿದಿದೆ.

1975ರ ತುರ್ತು ಪರಿಸ್ಥಿತಿ ಕಾಲದಲ್ಲಿ ಇಂದಿರಾ ಗಾಂಧಿ ಯವರ ಸರ್ವಾಧಿಕಾರಿ ಆಡಳಿತವನ್ನು ವಿರೋಧಿಸುವ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದ ಆಂದೋಲನದೊಳಗೆ ಆರ್‌ಎಸ್‌ಎಸ್ ಹಾಗೂ ಇಂದಿನ ಬಿಜೆಪಿಯಾಗಿರುವ ಅಂದಿನ ಜನಸಂಘ ನುಸುಳಿಕೊಂಡಿತು. ಅಂದಿನಿಂದ ಅದರ ಜಾಯಮಾನ ಬೇರೆಯೇ ಆಗಿಬಿಟ್ಟಿತು. ಸಮಾಜದಿಂದ ನಿರಾಕರಣೆಗೆ ಒಳಗಾಗಿದ್ದ ಆರ್‌ಎಸ್‌ಎಸ್ ಸಮಾಜದಲ್ಲಿ ಒಪ್ಪಿತವಾಗತೊಡಗಿತು. ಆ ಸಮಯದಲ್ಲಿ ನೂತನವಾಗಿ

ರೂಪಿತವಾಗುವ ಜನತಾ ಪಕ್ಷದಲ್ಲಿ ಸೇರ್ಪಡೆಯಾಗುವ ಮೊದಲು, ಜಯಪ್ರಕಾಶ್ ನಾರಾಯಣ್ ಅವರಿಗೆ ಅಂದಿನ ಆರ್‌ಎಸ್‌ಎಸ್ ಮುಖ್ಯಸ್ಥರೂ ಒಪ್ಪಿಗೆ ನೀಡಿ ಇಂದಿನ ಬಿಜೆಪಿಯಾಗಿರುವ ಅಂದಿನ ಜನಸಂಘವು, ತಾನು ದ್ವಿಸದಸ್ಯತ್ವ ತೊರೆಯುವುದಾಗಿ ವಚನ ನೀಡಿದ್ದವು. ಈ ಮಾತು ಕೊಟ್ಟವರಲ್ಲಿ ಎ.ಬಿ.ವಾಜಪೇಯಿ, ಎಲ್.ಕೆ. ಅದ್ವಾನಿಯವರೂ ಜೊತೆಗೆ ಆರ್‌ಎಸ್‌ಎಸ್ ಮುಖ್ಯಸ್ಥ ಬಾಳಾ ಸಾಹೇಬ ದೇವರಸ್ ಪ್ರಮುಖರು. ಇವರು ಎತ್ತರದ ನಾಯಕರು ಎಂದು ವಿಶ್ವಾಸವಿಟ್ಟಿದ್ದ ಜೆಪಿಯವರು ಅವರ ಮಾತುಗಳನ್ನು ನಂಬಿದ್ದರು. ಆದರೆ ಆರ್‌ಎಸ್‌ಎಸ್ ಮೂಲದವರು ಜನತಾಪಕ್ಷವಾಗಿ ಎಲ್ಲರ ಜೊತೆಯಾದರೂ ಆರ್‌ಎಸ್‌ಎಸ್‌ನೊಡನೆ ತನ್ನ ದ್ವಿಸದಸ್ಯತ್ವ ತೊರೆದುಕೊಳ್ಳಲಿಲ್ಲ, ವಚನಭ್ರಷ್ಟವಾಯ್ತು. ಜೆಪಿಯವರನ್ನು ನಂಬಿಸಿ ದ್ರೋಹ ಮಾಡಿತು. ಜಯಪ್ರಕಾಶ್ ನಾರಾಯಣ್ ಅವರು ತಮ್ಮ ಇಳಿಗಾಲದಲ್ಲಿ ಆರ್‌ಎಸ್‌ಎಸ್ ಮೂಲದವರ ದ್ರೋಹವನ್ನು ನೆನಪಿಸಿಕೊಂಡು 'ನನಗೆ ವಿಶ್ವಾಸದ್ರೋಹ ಬಗೆದರು' ಎನ್ನುತ್ತ ಪರಿತಪಿಸುತ್ತಾರೆ. **(1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಯಪ್ರಕಾಶ್ ನಾರಾಯಣರನ್ನು ಚಂಡಿಗಢದಲ್ಲಿ ಗೃಹಬಂಧನದಲ್ಲಿಟ್ಟಿದ್ದಾಗ ಸರ್ಕಾರ ಜೆಪಿಯವರನ್ನು ಗಮನಿಸುವ ಉಸ್ತುವಾರಿಯಾಗಿ ಅಲ್ಲಿನ ಜಿಲ್ಲಾಧಿಕಾರಿಗಳಾದ ಎಂ.ಜಿ.ದೇವಸಹಾಯಂ ಅವರನ್ನು ನೇಮಿಸಿರುತ್ತದೆ. ದಿನನಿತ್ಯದ ಒಡನಾಟದಲ್ಲಿ ಅವರು ಜೆಪಿಯವರ ಆತ್ಮೀಯರಾಗಿ ಬಿಡುತ್ತಾರೆ. ಬಿಡುಗಡೆಯಾದ ಮೇಲೂ ಅವರ ಒಡನಾಟ ಮುಂದುವರಿಯುತ್ತದೆ. ಶ್ರೀ ಎಂ.ಜಿ.ದೇವಸಹಾಯಂ**

ಅವರು ಅಜಾಜ್ ಅಶ್ರಫ್ ಅವರಿಗೆ ನೀಡಿದ ಸಂದರ್ಶನದಲ್ಲಿ ಮೇಲ್ಕಂಡ ಉಲ್ಲೇಖಿತ ಮಾತುಗಳು ಬರುತ್ತವೆ. ಇದು ನ್ಯೂಸ್‌ಕ್ಲಿಕ್ ಅಂತರ್‌ಜಾಲ ಪತ್ರಿಕೆಯಲ್ಲಿ newsclick.in 26 ಜೂನ್, 2019ರಂದು ಪ್ರಕಟವಾಗಿದೆ.)

ಅಲ್ಲಿಂದ, ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಂಘಪರಿವಾರದ ವಂಚನಾ ಪರ್ವ ದೇಶದ ಉದ್ದಗಲಕ್ಕೂ ವ್ಯಾಪಿಸುತ್ತದೆ. ಪಾಕಿಸ್ತಾನವನ್ನು ಶಾಶ್ವತ ಶತ್ರುರಾಷ್ಟ್ರವಾಗಿ ಬಿಂಬಿಸುತ್ತ ಇಲ್ಲಿ ಸಣ್ಣಪುಟ್ಟ ಗಲಾಟೆಗಳಾದರೂ ಅದಕ್ಕೆಲ್ಲಾ ಪಾಕಿಸ್ತಾನವೇ ಕಾರಣವೆಂದು ಪ್ರಚಾರ ಮಾಡುತ್ತಾ, ಪರಸ್ಪರ ಎತ್ತಿ ಕಟ್ಟುತ್ತಾ, ಸಮಾಜದಲ್ಲಿ ಭೀತಿ ವಾತಾವರಣ ಉಂಟುಮಾಡುತ್ತಾ, ಕೆಲವು ಸಲ ತಾವೇ ಗಲಾಟೆ ಮಾಡಿ ಅದನ್ನು ಮುಸ್ಲಿಮರ ಮೇಲೆ ಆರೋಪಿಸುತ್ತಾ, ಒಟ್ಟಿನಲ್ಲಿ ಎಲ್ಲರ ನೆಮ್ಮದಿ ಕೆಡಿಸಿ ಉಂಟಾದ ಗೊಂದಲ, ಅನುಮಾನ, ದ್ವೇಷದ ವಾತಾವರಣದಲ್ಲಿ ಬಿಜೆಪಿ ಅಧಿಕಾರಕ್ಕೂ ಬಂದುಬಿಟ್ಟಿತು. ಈಗ, ನೂರಾರು ಪಂಥಗಳ, ನಾಕಾರು ಧರ್ಮಗಳ ವೈವಿಧ್ಯಮಯ ಸಮೃದ್ಧ ವಿಶಾಲ ಹಿಂದೂ ಧರ್ಮವೂ ಜಯಪ್ರಕಾಶ್ ನಾರಾಯಣ್‌ರಂತೆ 'ತಾನೂ ಮೋಸ ಹೋದೆ' ಅಂತ ಪರಿತಪಿಸುವಂತಾಗಿದೆ.

ಬಿಜೆಪಿಯು ತಾನು ಅಧಿಕಾರಕ್ಕೆ ಬರುವ ಮೊದಲು, ಕೊಟ್ಟ ಮಾತುಗಳೆಷ್ಟು, ತೊಟ್ಟ ವೇಷಗಳೆಷ್ಟು? ಒಂದೇ?

ಎರಡೆ? ವಿದೇಶಗಳಲ್ಲಿ ಭಾರತೀಯರು ಇಟ್ಟಿರುವ ಕಪ್ಪುಹಣ ತಂದರೆ ಎಲ್ಲಾ ಭಾರತೀಯರ ಅಕೌಂಟ್‌ಗೆ 15 ಲಕ್ಷ ಹಾಕಬಹುದು ಎಂದು ಸ್ವತಃ ನರೇಂದ್ರ ದಾಮೋದರದಾಸ್ ಮೋದಿಯವರೇ ಅಂದರು. ಭಾರತದ ಮುಗ್ಧ ಜನತೆಯು ಸ್ವತಃ ಮೋದಿಯವರೇ ಹೇಳಿದ ಮೇಲೆ ತಮ್ಮ ಅಕೌಂಟ್‌ಗೂ 15 ಲಕ್ಷ ಬರುತ್ತದೆ ಎಂದು ಈಗಲೂ ಕಾಯುತ್ತಿದ್ದಾರೆ. ಯಾರಿಗೆ ಬಂತು? ಬಂದಿದ್ದರೆ ಎಲ್ಲಿಗೆ ಹೋಯಿತು? ಆಮೇಲೆ ಮೋದಿಯವರೇ ವರ್ಷಕ್ಕೆ ಕೋಟಿಗಟ್ಟಲೆ ಉದ್ಯೋಗ ಸೃಷ್ಟಿಸುತ್ತೇವೆಂದರು. ಎಂದೂ ಇಲ್ಲದಷ್ಟು ನಿರುದ್ಯೋಗ ಹೆಚ್ಚಿಸಿಬಿಟ್ಟರು! ಹೇಳುವವರು ಯಾರು? ಕೇಳುವವರು ಯಾರು? ರೈತರ ಆದಾಯವನ್ನು ದುಪ್ಪಟ್ಟುಗೊಳಿಸುತ್ತೇವೆಂದರು. ಇರುವ ಆದಾಯವನ್ನಾದರೂ ಉಳಿಯಗೊಡಿಸಲಿಲ್ಲ. ನೆಲಕಚ್ಚಿಸಿಬಿಟ್ಟರು. ಇವರು ಯಾವುದನ್ನೂ ಉಳಿಯಗೊಳಿಸುತ್ತಿಲ್ಲ. ಸಾರ್ವಜನಿಕ ಸಂಪತ್ತನ್ನು ಖಾಸಗಿಗೆ ಮಾರುತ್ತ ಬದುಕುತ್ತಿದ್ದಾರೆ. ವಿದೇಶಿ ಸಾಲವನ್ನು ಎಂದೂ ಇಲ್ಲದಷ್ಟು ಹೆಚ್ಚು ಮಾಡಿದ್ದಾರೆ. ಇದನ್ನೆಲ್ಲಾ ನೋಡಿದಾಗ, ಇವರು ಮರಳಲ್ಲೆ ಮನೆಕಟ್ಟುತ್ತ ಬಣ್ಣದ ಮಾತುಗಳನ್ನು ಆಡುತ್ತ ಭಾರತವನ್ನು ಪಾಪರ್ ಮಾಡಿಬಿಡುತ್ತಾರೇನೊ ಅನ್ನಿಸಿಬಿಡುತ್ತದೆ. ಇವರ ಆಳ್ವಿಕೆಯಲ್ಲಿ ನಿರುದ್ಯೋಗ ಹೆಚ್ಚಾದರೂ ಇವರಿಗೆ ಸಮಸ್ಯೆ ಅಲ್ಲ; ಬೆಲೆ ಏರಿಕೆ ಹೆಚ್ಚಾದರೂ ಇವರಿಗೆ ಸಮಸ್ಯೆ ಅಲ್ಲ.

ಜನಸಮುದಾಯಗಳ ನಡುವೆ ದ್ವೇಷದ ಕಿಡಿ ಹಚ್ಚಿ ಅದರಲ್ಲಿ ಜನ ಕುದಿಯುವಂತೆ ಮಾಡಿ ಪ್ರಜೆಗಳ ಹೊಟ್ಟೆಗೆ ದ್ವೇಷದ ಆಹಾರ ನೀಡಿ ಮಲಗಿಸುತ್ತಿದೆ– ಹೀಗಿದೆ ಇವರ ಆಳ್ವಿಕೆ. ಬಿಜೆಪಿಗೆ ಮತ ನೀಡಿ ಅವರನ್ನು ಅಧಿಕಾರದ ಗದ್ದುಗೆ ಮೇಲೆ ಕೂರಿಸಿದ ಮತದಾರರೂ ಇಂದು ಪರಿತಪಿಸಬೇಕಾಗಿದೆ.

ಇದಕ್ಕೆಲ್ಲಾ ಕಾರಣ, ಇಂದು ಭಾರತದಲ್ಲಿ ಪ್ರಜೆಗಳ ಪ್ರಭುತ್ವದ ಸ್ಥಿತಿಯು ಗತಿಗೆಟ್ಟಿದೆ. ಪ್ರಜೆಗಳಿಂದ ಆಯ್ಕೆಯಾದ ಪ್ರಜಾಪ್ರತಿನಿಧಿಯು ತನ್ನನ್ನು ಆಯ್ಕೆ ಮಾಡಿದ ಪ್ರಜೆಗಳ ಕಷ್ಟಸುಖಕ್ಕೆ ಹಿತಾಸಕ್ತಿಗೆ ನಿಷ್ಠನಾಗಿಲ್ಲ. ಇದಕ್ಕೆ ಕಾರಣ– ಭಾರತದ ರಾಜಕೀಯ ಪಕ್ಷಗಳ ಚಹರೆ ನೋಡಿದರೆ, (1)'ಏಕವ್ಯಕ್ತಿ ನಿಯಂತ್ರಿತ' ಪಕ್ಷ ರಾಜಕಾರಣ (2) 'ಕುಟುಂಬ ನಿಯಂತ್ರಿತ' ಪಕ್ಷ ರಾಜಕಾರಣ (3) 'ಸಂವಿಧಾನೇತರ ಸಂಘ/ಸಂಘಟನೆ ನಿಯಂತ್ರಿತ' ಪಕ್ಷ ರಾಜಕಾರಣ – ಈ ಮೂರು ಬಗೆಯ ಪಕ್ಷಗಳು ಭಾರತದಲ್ಲಿ ಒಂದಲ್ಲಾ ಒಂದು ಕಡೆ ಆಳ್ವಿಕೆ ನಡೆಸುತ್ತಿವೆ. ಈ ಮೂರೂ ಪ್ರಜಾಪ್ರಭುತ್ವಕ್ಕೆ ಮಾರಕವಾದವುಗಳು. ದೇಶದ ಚುಕ್ಕಾಣಿಯನ್ನು ಸಂವಿಧಾನೇತರ ಸಂಘ/ಸಂಘಟನೆ ನಿಯಂತ್ರಿತ ಪಕ್ಷ ಬಿಜೆಪಿ ಹಿಡಿದಿದೆ. ಈ ಮೂರೂ ಪಕ್ಷಗಳಿಂದ ಆಯ್ಕೆಯಾದವರ ನಿಷ್ಠೆಯು ತನ್ನನ್ನು ಆಯ್ಕೆ ಮಾಡಿದ ಮತದಾರರ

ಹಿತಕ್ಕಿಂತಲೂ ಹೆಚ್ಚಾಗಿ ತನ್ನ ಪಕ್ಷವನ್ನು ನಿಯಂತ್ರಿಸುವ ವ್ಯಕ್ತಿಗೆ/ಕುಟುಂಬಕ್ಕೆ ಇರುವಂತೆ, ಸಂವಿಧಾನೇತರ ಸಂಘ/ಸಂಘಟನೆ ನಿಯಂತ್ರಿಸುವ ಪಕ್ಷದ ಪ್ರಜಾಪ್ರತಿನಿಧಿಗಳ ನಿಷ್ಠೆ ಆ ಸಂವಿಧಾನೇತರ ಸಂಘಕ್ಕೇನೆ ಹೆಚ್ಚು ಇರುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಎಲ್ಲಕ್ಕಿಂತ ಹೆಚ್ಚು ಡೇಂಜರ್. ಇಂದು ಬಿಜೆಪಿಯ ಶಾಸಕ, ಸಂಸದ, ಸಚಿವರು ಅಥವಾ ಯಾವುದೇ ದೊಡ್ಡ, ಸಣ್ಣ, ಪುಟ್ಟ ನಾಯಕರ ದಂಡು ನಾ ಮುಂದು ತಾ ಮುಂದು ಎಂಬಂತೆ ತನ್ನ ಬಿಜೆಪಿಯ ರಾಜಕಾರಣವನ್ನು ನಿಯಂತ್ರಿಸುವ ಆರ್‌ಎಸ್‌ಎಸ್ ಮೆಚ್ಚಿಸಲು ಅಬ್ಬರಿಸುವುದಕ್ಕೆ ಇದಲ್ಲದೆ ಬೇರೆ ಕಾರಣ ಇರಲಾರದು!

ಸಂವಿಧಾನೇತರ ಸಂಘ ನಿಯಂತ್ರಿಸುವ ಪಕ್ಷ ರಾಜಕಾರಣದಲ್ಲಿ ಇನ್ನೊಂದು ಅಂಶ ಗಮನಿಸಬೇಕು, ಉದಾಹರಣೆಗೆ ಬಿಜೆಪಿಗೆ ಬಹುಮತ ತಂದು ಕೊಟ್ಟು ಪ್ರಧಾನಿಯಾದ ಮೋದಿಯವರು ಬಲಿಷ್ಠ ನಾಯಕರೆಂಬಂತೆ ಬಿಂಬಿತವಾಗುತ್ತಿದ್ದಾರೆ. ಆದರೆ ಇವರು ಉತ್ಸವಮೂರ್ತಿ ಅಷ್ಟೆ. ಆದರೆ ಮೂಲದೇವರಾದ ಆರ್‌ಎಸ್‌ಎಸ್ ನಾಗಪುರದ ಗುಡಿಯಲ್ಲಿ ಕೂತಿರುತ್ತದೆ. ಉತ್ಸವಮೂರ್ತಿ ದೇಶದ ಉದ್ದಗಲಕ್ಕೂ ವಿಜೃಂಭಿಸುತ್ತಿರುತ್ತದೆ. ಜೈ ಜೈ ಅನ್ನಿಸಿಕೊಳ್ಳುತ್ತಿರುತ್ತದೆ. ಉತ್ಸವಮೂರ್ತಿಗೆ ಬೇಕಾದ

ಸಾಮರ್ಥ್ಯ ಎಂದರೆ ಪ್ರದರ್ಶನ ನೀಡುವ ಕಲೆಗಾರಿಕೆ ಹಾಗೂ ತನ್ನ ಆಳ್ವಿಕೆಯಲ್ಲಿ ಸಮಸ್ಯೆಗಳು ಉಲ್ಬಣವಾಗಿ ನಿಯಂತ್ರಣ ತಪ್ಪುತ್ತಿರುವಾಗ, ಅದನ್ನು ಭಾವನಾತ್ಮಕವಾಗಿ ತಿರುಗಿಸಿ ಗಲಾಟೆ ಎಬ್ಬಿಸಿ ಮರೆಮಾಚುವ ಚಾಣಾಕ್ಷತನ ಹಾಗೂ ಜನರನ್ನು ಮರುಳು ಮಾಡುವ ಮೋಡಿ ವಿದ್ಯೆ ಹಾಗೂ ಗರ್ಭಗುಡಿ ದೇವರಿಗೆ ಪರಮ ನಿಷ್ಠೆ. ಇದಿಷ್ಟೆ ಬೇಕಾಗಿರುವುದು.

ಇದಿಷ್ಟೆ ಅಲ್ಲವೇ ಇಂದು ಕಾಣುತ್ತಿರುವುದು? ಮತ್ತು ಇಂಥ ಕಡೆ ಪ್ರಜಾಪ್ರಭುತ್ವಕ್ಕೆ ಸಂಭವನೀಯ ಇನ್ನೊಂದು ದುರಂತವೆಂದರೆ, ಸಂವಿಧಾನೇತರ ಸಂಘ ನಿಯಂತ್ರಿತ ಪಕ್ಷದ ನಾಯಕತ್ವದ ಪಟ್ಟವು ಗರ್ಭಗುಡಿಯಲ್ಲಿರುವ ದೇವರು ಹೂ ಕೊಟ್ಟಂತೆ ನಿರ್ಧರಿಸಲ್ಪಡುತ್ತದೆ. ಎಲ್ಲವೂ ತೊಗಲುಗೊಂಬೆ ಆಟದಂತೆ! ಹಾಲಿ ನಾಟಕ ಆಡುತ್ತಿರುವ ತೊಗಲುಗೊಂಬೆಗಿಂತಲೂ ಇನ್ನೊಂದು ಹೆಚ್ಚು ಬಣ್ಣದ, ಹೆಚ್ಚು ನಿಷ್ಠೆ ಅಥವಾ ಬೇರಿಲ್ಲದೆ ತಾಳಕ್ಕೆ ಕುಣಿಯುವ, ಹೆಚ್ಚು ಮರುಳು ಮಾಡುವ ಹೊಸ ಕುಟಿಲ ತೊಗಲುಗೊಂಬೆ ಸಿಕ್ಕರೆ ಅದು ಬಲಿಷ್ಠ ಅಥವಾ ಚಾಣಾಕ್ಷ ಮುಖವಾಡದಲ್ಲಿ ರಂಗಪ್ರವೇಶ ಮಾಡುತ್ತದೆ. ಅದು ನಾಯಕ ಆಗುತ್ತದೆ. ಮೊದಲು ನಾಯಕ ಆಟ ಆಡಿದ್ದು

ಮೂಲೆಗೆ ಎಸೆಯಲ್ಪಡುತ್ತದೆ. ತಾಳಕ್ಕೆ ಕುಣಿಯದ ಯಾವ ಬಲಿಷ್ಠ ನಾಯಕರೂ ಇಲ್ಲಿ ಹೆಚ್ಚು ದಿನ ಉಳಿಯಲಾರರು. ಪ್ರಜೆಗಳಿಂದ ಆಯ್ಕೆ ಯಾದವರ ಪರಿಸ್ಥಿತಿಯೇ ಹೀಗಾದರೆ? ಇದು ಘನ ಘೋರ. ಪ್ರಜಾಪ್ರಭುತ್ವಕ್ಕೆ ಇದೇ ಎಲ್ಲಕ್ಕಿಂತಲೂ ತುಂಬಾ ಹೆಚ್ಚು ಮಾರಕ. ಅಪಾಯಕಾರಿ ಬೆಳವಣಿಗೆ.

ಇವೆಲ್ಲಾ ಕೂಡಿಕೊಂಡು ಜನಜೀವನ ಘನಘೋರ ವಾಗಿದೆ. ಸಂವಿಧಾನೇತರ ಸಂಘ/ಸಂಘಟನೆ ನಿಯಂತ್ರಿತ ಪಕ್ಷವಾದ ಬಿಜೆಪಿಯ ನೇತಾರ ದೇಶದ ಪ್ರಧಾನಿಗೆ ಸಾಮರ್ಥ್ಯ ಇದ್ದಿದ್ದರೆ ನಿರುದ್ಯೋಗ ಕಮ್ಮಿ ಆಗುತ್ತಿತ್ತು. ಬೆಲೆ ಏರಿಕೆ ನಿಯಂತ್ರಣದಲ್ಲಿರುತ್ತಿತ್ತು. ಸಾರ್ವಜನಿಕ ಸಂಪತ್ತನ್ನು ಮಾರುತ್ತ ಸರ್ಕಾರ ನಡೆಸುತ್ತಿರಲಿಲ್ಲ. ವಿದೇಶಿ ಸಾಲ ಹೆಚ್ಚು ಮಾಡುತ್ತಿರಲಿಲ್ಲ. ಭಾರತದ ಸ್ವಾಯತ್ತ ಸಂಸ್ಥೆಗಳ ಹಲ್ಲು, ಉಗುರು ಕಿತ್ತು ನಿಸ್ತೇಜಗೊಳಿಸುತ್ತಿರಲಿಲ್ಲ. ಪ್ರಧಾನಿ ಮೋದಿ ದುನಿಯಾದಲ್ಲಿ ಕೊರೋನಾಕ್ಕೆ ಮೊದಲು 2020ರಲ್ಲಿ **ಗುಜರಾತ್‌ನ ಅಂಬಾನಿಯವರ ಒಟ್ಟು ಸಂಪತ್ತು 2.86 ಲಕ್ಷ ಕೋಟಿ ಇತ್ತು. ಕೇವಲ ಎರಡೇ ವರ್ಷಗಳಲ್ಲಿ (ಜೂನ್ 10, 2022) ಅದು 8.03 ಲಕ್ಷ ಕೋಟಿ ರೂಪಾಯಿಗಳಿಗೆ ಏರಿದೆ! ಹೀಗೆಯೇ ಗುಜರಾತ್‌ನ ಅದಾನಿಯವರ ಒಟ್ಟು ಸಂಪತ್ತು ಕೊರೋನಾಕ್ಕೆ ಮೊದಲು 2020ರಲ್ಲಿ 69 ಸಾವಿರ ಕೋಟಿಗಳಷ್ಟು ಇತ್ತು. ಅಂದರೆ ಅಂಬಾನಿಯ ಸಂಪತ್ತಿನ ಕಾಲುಭಾಗದಲ್ಲಿ ಕಾಲು ಭಾಗವೂ ಇರಲಿಲ್ಲ! ಹೀಗಿದ್ದ ಅದಾನಿಯವರ ಸಂಪತ್ತು ಕೇವಲ ಎರಡು**

ವರ್ಷಗಳಲ್ಲಿ (ಜೂನ್ 10, 2022) 7.80 ಲಕ್ಷ ಕೋಟಿ ರೂಪಾಯಿಗಳಿಗೆ ಏರಿದೆ. (ಉಲ್ಲೇಖ: FORBES Magazine)

ಒಂದೇ ಎರಡೆ? ಭಾರತವು ಭೀಕರ ಅಸಮಾನತೆ, ಅಸಮತೋಲನಗಳಿಂದ ಸೂತ್ರ ಕಿತ್ತ ಪಟದಂತೆ ಗೋತ ಹೊಡೆಯುತ್ತಾ ಹಾರಾಡುತ್ತಿದೆ! ಆದರೂ ಸಂಪತ್ತು ಉಳ್ಳವರಿಗೇ ಸರ್ಕಾರದ ಎಲ್ಲಾ ರಿಯಾಯಿತಿ, ತೆರಿಗೆಯಲ್ಲೂ ಕಡಿತ, ಅವರ ಹಿಂತಿರುಗಿಸದ ಸಹಸ್ರಾರು ಕೋಟಿ ಸಾಲವನ್ನು Write off ಮಾಡಿ, ಅಂದರೆ ಹಿಂತಿರುಗಿಬಾರದ ಆ ಸಾಲ ಮುಂದೊಂದು ದಿನ ಬರುತ್ತದೆಂದು ಅದರ ಲೆಕ್ಕಾಚಾರವನ್ನು ಪಕ್ಕಕ್ಕಿಟ್ಟು ಮತ್ತೆ ಅವರಿಗೆ ಸಾಲಕ್ಕೆ ಅವಕಾಶ ಕಲ್ಪಿಸುವುದೇ ಮುಂತಾದವಕ್ಕೆ ಮಾತ್ರ ಈ ಸರ್ಕಾರ ಇದೆಯೇನೋ ಅನಿಸುತ್ತದೆ. ಬಡವರ ಸಂಖ್ಯೆ ದ್ವಿಗುಣವಾಗುತ್ತಿದೆ. ಈ ಸರ್ಕಾರ ಯಾರಿಗಾಗಿ ಇದೆ? ಇಡೀ ಭಾರತದ ಜನತೆ ಈಗ ತಲೆ ಮೇಲೆ ಕೈ ಹೊತ್ತು ಚಿಂತಿಸುವಂತಾಗಿದೆ.

ಆದರೆ ಶತಾಯಗತಾಯ ಏನೇ ಆಗಲಿ, ಪ್ರಜೆಗಳು ಸಮಸ್ಯೆಗಳಿಂದ ತತ್ತರಿಸುತ್ತಿರಲಿ, ಏನೇ ಬರಲಿ ಅಥವಾ ಏನೇ ಆಗಲಿ, ದೇಶ ಧೂಳೀಪಟವಾದರೂ ಸರಿಯೇ, ಆದರೆ ಸಂವಿಧಾನೇತರ ಸಂಘ ನಿಯಂತ್ರಿತ ಪಕ್ಷ ಬಿಜೆಪಿಯು ದೇಶಪ್ರೇಮ ಜಪಿಸುತ್ತ ತರುತ್ತಿರುವ ಕಾನೂನು

ಗಳೊ ತಿದ್ದುಪಡಿಗಳೊ ಅದರಲ್ಲಿ ಮಾತ್ರ ಚಾತುರ್ವರ್ಣ ಪದ್ಧತಿ, ಮನುಧರ್ಮಶಾಸ್ತ್ರ ನುಸುಳುವಿಕೆ, ಭಾರತ ಸಂವಿಧಾನದ ಧ್ವಂಸ, ಇಸ್ಲಾಂ, ಕ್ರಿಶ್ಚಿಯನ್ ಅಸಹನೆ, ಜೊತೆಗೆ ಆರ್ಯನ್ ಶ್ರೇಷ್ಠತೆ ಇವು ಇದ್ದಿರಲೇಬೇಕು. ಇವು ಹುಡುಕಿದರೆ ಸಿಗುತ್ತಾ ಹೋಗುತ್ತವೆ. ಈಗಾಗಲೇ, ಕರ್ನಾಟಕದಲ್ಲಿ ತಂದಿರುವ 'ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣೆ ಕಾಯ್ದೆ' ಮೇಲ್ನೋಟಕ್ಕೆ ಇದು ಏನೋ ಒಂದು ಕಾಯ್ದೆ ಎಂಬಂತಿದೆ. ಇದರ ಹೊಟ್ಟೆ ಬಗೆದು ನೋಡಿದರೆ ಒಳಗೆ ಭಾರತ ಸಂವಿಧಾನದ ಧ್ವಂಸ ಹಾಗೂ ಮನುಧರ್ಮ ಶಾಸ್ತ್ರದ ಪ್ರತಿಷ್ಠಾಪನೆ ಇದೆ. ಸಂವಿಧಾನದ ಪ್ರಕಾರ ಇರುವ ಸ್ವಾತಂತ್ರ್ಯದ ಬಗ್ಗೆ ನಾವೆಲ್ಲರೂ ಮಾತಾಡುತ್ತೇವೆ. ಆದರೆ ಆರ್‌ಎಸ್‌ಎಸ್‌ಗೆ 'ಸ್ವಾತಂತ್ರ್ಯ'ದ ಅರ್ಥವೇ ಬೇರೆ. ಆರ್‌ಎಸ್‌ಎಸ್‌ನ ಗುರೂಜಿ ಗೋಲ್ವಾಲ್ಕರ್ ಅವರು 'ನಮ್ಮ ರಾಷ್ಟ್ರೀಯ ಜೀವನ ಮೌಲ್ಯವನ್ನು, ಎಂದರೆ ನಮ್ಮ 'ಧರ್ಮ' ಮತ್ತು 'ಸಂಸ್ಕೃತಿ'ಯನ್ನು ರಕ್ಷಿಸಿ ಪ್ರಸಾರ ಮಾಡುವುದೇ 'ಸ್ವತಂತ್ರ'ತೆಯ ಅಸ್ತಿತ್ವಕ್ಕೆ 'ಮೂಲ ಸ್ಫೂರ್ತಿ' ಎಂಬುದು ನಮ್ಮ ಚಾರಿತ್ರಿಕ ಸಂಪ್ರದಾಯದ ದೃಷ್ಟಿ' ಎಂದು ತಮ್ಮ 'ಚಿಂತನಗಂಗಾ' ಕೃತಿಯಲ್ಲಿ ಹೇಳುತ್ತಾರೆ.

ಆರ್‌ಎಸ್‌ಎಸ್ ಸಂತಾನ ಬಿಜೆಪಿಗೆ ಅವರ ಗುರು

ಗೋಲ್ವಾಲ್ಕರ್ ಅವರ ಮಾತೇ ಸಂವಿಧಾನವಾಗಿದೆ. ಇಲ್ಲಿ ಗೋಲ್ವಾಲ್ಕರ್ ಚಿಂತನೆಯ 'ಧರ್ಮ' ಅಂದರೆ, ಅಸಂಖ್ಯ ವೈವಿಧ್ಯಮಯ ಹಿಂದೂ ಪ್ರಭೇದಗಳಲ್ಲಿ ಇದು ಕೇವಲ ಚಾತುರ್ವರ್ಣ ಪ್ರತಿಪಾದಿಸುವ ಅಲ್ಪ ಹಿಂದೂ ಗುಂಪು ಎನ್ನುವುದನ್ನು ನಾವು ಗುರುತಿಸಬೇಕು ಹಾಗೂ ಈ ಅಲ್ಪ ಹಿಂದೂ ಪ್ರಭೇದವೇ ಧರ್ಮ ಅನ್ನಿಸಿಕೊಂಡುಬಿಟ್ಟರೆ ಅದು ಧರ್ಮವೇ ಅಥವಾ ಅಧರ್ಮವೇ? ಇದನ್ನು ಪ್ರಶ್ನಿಸಬೇಕು. ಆರ್‌ಎಸ್‌ಎಸ್ ಹೇಳುವ 'ಹಿಂದೂ ಧರ್ಮ' ಎನ್ನುವುದನ್ನು ಇನ್ನು ಮುಂದಾದರೂ ಚಾತುರ್ವರ್ಣ ಮತ ಎಂದು ನಾವು ಸಾರಿ ಸಾರಿ ಹೇಳಬೇಕಾಗಿದೆ ಹಾಗೂ ಶ್ರೀ ಗೋಲ್ವಾಲ್ಕರ್ ಅವರ ಚಾತುರ್ವರ್ಣ ಪದ್ಧತಿಯೇ ಧರ್ಮವಾದರೆ, ಭಾರತ ಸಂವಿಧಾನ ನೀಡಿರುವ ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯಗಳ ಗತಿ ಏನಾಗಬೇಕು? ಇದಲ್ಲದೆ, ಈ ಹಿಂದೆ, ಚಾತುರ್ವರ್ಣ ಸಾಮಾಜಿಕ ಪದ್ಧತಿಯಲ್ಲಿ ಭಾರತದ ಬಹುಸಂಖ್ಯಾತರಾದ ಶೂದ್ರರು ಅನ್ನಿಸಿಕೊಂಡಿದ್ದವರು ಮತ್ತೆ ಶೂದ್ರರೇ ಆಗಬೇಕೆ? ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ದ್ವಿಜರ ಸೇವಕರಾಗಿ ಜೀವನ ಸವೆಸಬೇಕೆ? ನಾವು ತುಂಬಾ ಗಂಭೀರವಾಗಿ ಇವುಗಳಿಗೆ ಮುಖಾಮುಖಿ ಯಾಗಬೇಕಾಗಿದೆ.

ಇಲ್ಲೂ ಅಷ್ಟೆ, ಗೋಲ್ವಾಲ್ಕರ್ ಅವರು ತಮ್ಮ 'ಚಿಂತನಗಂಗಾ'ದಲ್ಲಿ ಸಂವಿಧಾನದಲ್ಲಿರುವ ಒಕ್ಕೂಟ ವ್ಯವಸ್ಥೆಯನ್ನು ಹೂತು ಹಾಕಬೇಕೆನ್ನುತ್ತಾರೆ. ಆರ್‌ಎಸ್‌ಎಸ್ ಸಂತಾನ ಬಿಜೆಪಿ ಆಳ್ವಿಕೆಯು ಒಕ್ಕೂಟ ವ್ಯವಸ್ಥೆಯನ್ನು ಒಂದೇ ಏಟಿಗೆ ಹೂತು ಹಾಕಿಬಿಟ್ಟಿತು– ಜಿಎಸ್‌ಟಿ ತರುವ ಮೂಲಕ. ಮೇಲ್ನೋಟಕ್ಕೆ ಜಿಎಸ್‌ಟಿ ಅನ್ನುವುದೂ ಕೂಡ ಯಾವುದೋ ಒಂದು ಆರ್ಥಿಕ ಸುಧಾರಣಾ ಪದ್ಧತಿ ಎಂಬಂತೆ ಕಾಣಿಸುತ್ತದೆ. ಆದರೆ ಪರಿಣಾಮದಲ್ಲಿ? ಒಕ್ಕೂಟ ವ್ಯವಸ್ಥೆಯ ರಾಜ್ಯಗಳು ಜಿಎಸ್‌ಟಿಗೆ ಒಪ್ಪಿ ತಮ್ಮ ಜುಟ್ಟನ್ನು ಕೇಂದ್ರಕ್ಕೆ ಕೊಟ್ಟಂತೆ ಆಯ್ತು. ರಾಜ್ಯಗಳು ತನ್ನ ಸಂಪತ್ತನ್ನು ಕೇಂದ್ರದ ಪದತಲದಲ್ಲಿಟ್ಟು ತಾನೇ ಕೇಂದ್ರದಿಂದ ಭಿಕ್ಷೆ ಬೇಡುವ ಪರಿಸ್ಥಿತಿ ಈಗ ನಿರ್ಮಾಣವಾಗಿದೆ. ಅಂತೂ ಕೇಂದ್ರ ಬಿಜೆಪಿ ಸರ್ಕಾರವು ತನ್ನ ಗುರು ಗೋಲ್ವಾಲ್ಕರ್ ಅವರಿಗೆ ಒಕ್ಕೂಟ ವ್ಯವಸ್ಥೆಯನ್ನು ಹೂತು ಹಾಕುವುದರ ಮೂಲಕ ಗುರುದಕ್ಷಿಣೆ ನೀಡಿತು– ಭಾರತ ಸಂವಿಧಾನದ ಬಹುಮುಖ್ಯ ವ್ಯವಸ್ಥೆಯಾದ ಒಕ್ಕೂಟ ಸ್ವರೂಪದ ಪ್ರಾಣ ತೆಗೆಯುವ ಮೂಲಕ! ಭಾರತವು 'ರಾಜ್ಯಗಳ ಒಕ್ಕೂಟ' ಎಂಬುದು ದುರ್ಬಲವಾಗಿ 'ಬಲಿಷ್ಠ ಕೇಂದ್ರ' ಅನ್ನುವುದು ಬಲವಾಯ್ತು. ಹಾಗೇ, ಸಂಸ್ಕೃತವನ್ನು ಸಂಪರ್ಕ ಭಾಷೆ ಮಾಡುವ ಗುರಿ ತಲುಪಲು ಮೊದಲ ಹಂತವಾಗಿ

ಹಿಂದಿಯನ್ನು ಸಂಪರ್ಕ ಭಾಷೆ ಮಾಡುವ ಸಂಚೂ ಇಣುಕಿ ನೋಡುತ್ತಿದೆ. ಇದು ಏಕ ರಾಷ್ಟ್ರ, ಏಕ ಭಾಷೆ, ಏಕ ಜನಾಂಗದ ಹಿರಿಮೆ, ಏಕ ನಾಯಕ, ಇತ್ಯಾದಿ ಬಹುತ್ವ ವಿರೋಧಿ ಹಿಡನ್ ಅಜೆಂಡಾದ ಒಂದೊಂದೇ ಹೆಜ್ಜೆಗಳು.

ಇನ್ನು ಶಿಕ್ಷಣಕ್ಕೆ ಬಂದರೆ ಇಲ್ಲೂ ಅದೇ ಕತೆಯೆ. ಆರ್‌ಎಸ್‌ಎಸ್ ಮೊದಲು ಕೈಹಾಕುವುದು ಶಿಕ್ಷಣ ಮತ್ತು ಇತಿಹಾಸದ ಕುತ್ತಿಗೆಗಳಿಗೆ. ಇವರ ದ್ವೇಷ ಹೇಗಿದೆ ಅನ್ನುವುದಕ್ಕೆ ಉದಾಹರಣೆ ಎಂದರೆ, 6ನೆಯ ತರಗತಿ ಪಠ್ಯದಲ್ಲಿ "ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿದನು. ಫ್ರೆಂಚರ ಜೊತೆಯಲ್ಲಿ ಸಂಧಾನ ನಡೆಸಿ, ಬ್ರಿಟಿಷರನ್ನು ದೇಶದಿಂದ ಹೊರಹಾಕಲು ಟಿಪ್ಪು ಸುಲ್ತಾನ್ ಪ್ರಯತ್ನಿಸಿದ" ಎಂಬ ಅಂಶವನ್ನು ಕೈಬಿಡಲಾಗಿದೆ. ಹಾಗೇ ಟಿಪ್ಪುವಿನ ರೇಷ್ಮೆ ವ್ಯವಸಾಯ, ಭೂ ಸುಧಾರಣೆ, ರೈತರಿಗೆ ಕಂತಿನ ಮೂಲಕ ಸಾಲ ಒದಗಿಸಿದ್ದು, ಟಂಕಶಾಲೆ ನಿರ್ಮಾಣ ಇತ್ಯಾದಿಗಳನ್ನು ಕೈಬಿಟ್ಟಿದೆ. ಹಾಗೇ 6ನೆಯ ತರಗತಿ ಪಠ್ಯದಲ್ಲಿ 'ಹೊಸ ಧರ್ಮಗಳ ಉದಯ'– ಈ ಪಾಠದಲ್ಲಿದ್ದ ಜೈನ, ಬೌದ್ಧ, ಇವು ಧರ್ಮಗಳು ಎನ್ನುವುದನ್ನು ಸಹಿಸದೆ, ಕರ್ನಾಟಕ ಸರ್ಕಾರವು ಈಗ ಅದನ್ನು ಜೈನ ಮತ್ತು ಬೌದ್ಧ ಮತಗಳು ಎಂದು ತಿರುಚಿ 8ನೇ ತರಗತಿಗೆ ಪಠ್ಯ

ಮಾಡಿದೆ! ಭಾರತದ ನಿಜವಾದ ಧರ್ಮಗಳಾದ ಜೈನ, ಬೌದ್ಧ, ಸಿಖ್, ಲಿಂಗಾಯತ ಧರ್ಮಗಳು ಈ ಅಲ್ಪ ಚಾತುರ್ವರ್ಣ ಮತದ ಹಿಂದೂ ಪ್ರಭೇದಕ್ಕೆ ನುಂಗಲಾರದ ತುತ್ತುಗಳಾಗಿವೆ. ಭಾರತದಲ್ಲಿರುವ ಚಾತುರ್ವರ್ಣವನ್ನು ನಿರಾಕರಿಸುವ ನಿಜಧರ್ಮಗಳ ಹುಟ್ಟಡಗಿಸಲು ಆರ್‌ಎಸ್‌ಎಸ್ ಸತತ ಶ್ರಮಿಸುತ್ತಿದೆ.

ಇದು ಈಗಲದಲ್ಲ. 1998ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದಾಗ ಭಾರತ ಒಕ್ಕೂಟ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಡಾ.ಮುರಳಿ ಮನೋಹರ ಜೋಶಿಯವರು ಶಿಕ್ಷಣದಲ್ಲಿ 'ಪೌರೋಹಿತ್ಯ ಹಾಗೂ ಕರ್ಮಕಾಂಡ'ವನ್ನು ಪಠ್ಯವಿಷಯ ವಾಗಿ ಜಾರಿಗೆ ತಂದರು. ಇವರ ಕಾಲದಲ್ಲಿ ವೈಜ್ಞಾನಿಕ ಖಗೋಳಶಾಸ್ತ್ರಕ್ಕೆ ಬದಲಾಗಿ ಜ್ಯೋತಿಷ್ಯ ಶಾಸ್ತ್ರವನ್ನು ಕಲಿಸಲು ಆರಂಭಿಸಲಾಯಿತು. ಗಂಡು ಸಂತಾನವನ್ನು ಪಡೆಯಲು ಪುತ್ರಕಾಮೇಷ್ಠಿ ಯಜ್ಞವನ್ನು ನಡೆಸುವುದು ಹೇಗೆಂಬುದರ ಕಲಿಕೆ ಆರಂಭಿಸಲಾಯಿತು. ಅಂದರೆ ಇವರು ಮಕ್ಕಳ ತಲೆಯಲ್ಲಿ ವಿಚಾರಹೀನ ನಂಬಿಕೆಗಳನ್ನು ಮತ್ತು ಮೌಢ್ಯಗಳನ್ನು ತುರುಕುತ್ತಿದ್ದಾರೆ. ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಭಾಗಿಯಾಗುವ ಮಕ್ಕಳಿಗೆ ವಿವೇಚನಾಶಕ್ತಿ

ಬೇಕಾಗಿಲ್ಲ ಎನ್ನುವ ಗೋಲ್ವಾಲ್ಕರ್ ಮಾತಿನಂತೆ, ಅಧಿಕಾರ ಕ್ಕಾಗ ಶಿಕ್ಷಣದಲ್ಲೂ ಮಾಡಲು ಹೊರಟಿದ್ದಾರೆ.

ಹೀಗೆಯೇ ಇತ್ತೀಚೆಗೆ, ಸಿಬಿಎಸ್ಇ ಸಿಲಬಸ್‌ನಲ್ಲಿ ಹಲವಾರು ಪಠ್ಯವಿಷಯಗಳನ್ನು ತೆಗೆದುಹಾಕಿದೆ. ಅದರಲ್ಲಿ, ಹತ್ತನೆಯ ತರಗತಿ ಪಠ್ಯಕ್ರಮದಿಂದ, ಪ್ರಜಾಪ್ರಭುತ್ವ ಮತ್ತು ವೈವಿಧ್ಯತೆ, ಕೃಷಿ ಮೇಲೆ ಜಾಗತೀಕರಣದ ಪ್ರಭಾವ, ಜನಪ್ರಿಯ ಚಳವಳಿಗಳು ಮತ್ತು ಕೋಮುವಾದ ಹೀಗೆ ಅನೇಕ ಪಠ್ಯಗಳನ್ನು ತೆಗೆದುಹಾಕಿದೆ. ಈ ರೀತಿ ತೆಗೆಸುವುದ ಹಾಗಿಯೇ ಆರ್‌ಎಸ್‌ಎಸ್ ತನ್ನ ಒಂದು ಮರಿಸಂತಾನವನ್ನು ಹುಟ್ಟುಹಾಕಿದೆ. ಅದರ ನಾಮಧೇಯ 'ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್' ಅಂತ. ಇದು ಎನ್‌ಸಿಇಆರ್‌ಟಿ ಮೇಲೆ '1984ರ ಸಿಖ್ ಗಲಭೆಗಳ ಬಗ್ಗೆ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಕ್ಷಮೆ ಯಾಚಿಸಿ ದೊಡ್ಡತನ ತೋರಿರುವುದನ್ನು ಮತ್ತು 2002ರ ಗುಜರಾತ್ ಗಲಭೆಯಲ್ಲಿ ಸುಮಾರು ಎರಡು ಸಾವಿರ ಮುಸ್ಲಿಮರ ಹತ್ಯೆ ನಡೆದಿತ್ತೆಂಬ' ವಾಕ್ಯಗಳನ್ನು ಪಠ್ಯಗಳಿಂದಲೇ ಕೈಬಿಡಬೇಕೆಂದು ಒತ್ತಡ ಹೇರುತ್ತಲೇ ಇದೆ. ಹೀಗಿದೆ ಇವರ ಕರಾಮತ್ತು. ಕಣ್ಣಿಗೆ ಕಂಡದ್ದನ್ನೆ ನಾಪತ್ತೆ ಮಾಡುವ ಇವರು ಇನ್ನು ಕಾಣದ ಗತಕಾಲವನ್ನು ಏನೇನು ಮಾಡುತ್ತಾರೋ ಏನು ಕತೆಯೋ!

ಹೀಗೆ ಮುಂದುವರಿದರೆ, ಭಾರತದ ಸ್ವಾತಂತ್ರ್ಯ ಹೋರಾಟದಿಂದ ವಿಮುಖರಾದ ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೆವಾರ್ ಅವರನ್ನೂ, ಹಾಗೇ ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದು ಕೊಟ್ಟು ಜೈಲಿನಿಂದ ಬಿಡುಗಡೆಯಾದ ವ್ಯಕ್ತಿ ಇಂದು 'ವೀರ' ಪಟ್ಟದಲ್ಲೇ ರಾರಾಜಿಸುತ್ತಿರುವ ವಿ.ಡಿ. ಸಾವರ್ಕರ್ ಅವರನ್ನು, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ಎಂದು ಬಿಂಬಿಸಿ ಮುಂದೆ ಪಠ್ಯಗಳಲ್ಲಿ ಓದಬೇಕಾಗಿ ಬರಲೂಬಹುದು. ಅಷ್ಟೇಕೆ, ಗಾಂಧಿಯನ್ನು ಕೊಂದ ಗೋಡ್ಸೆಯನ್ನು 'ಹಿಂದು ಧರ್ಮ ರಕ್ಷಕ'ನೆಂದು ಪುರಾಣವೂ ಹುಟ್ಟಿಕೊಳ್ಳಬಹುದು. ಆರ್‌ಎಸ್‌ಎಸ್ ಪರಿವಾರವು ಏನೇನು ಹುಟ್ಟಿಸುತ್ತವೋ ಅದೇನು ಕತೆಯೊ!

ಎಷ್ಟಂತ ಹೇಳುವುದು? ಇನ್ನು ಆರ್‌ಎಸ್‌ಎಸ್‌ನ ಆರ್ಯನ್ 'ಶ್ರೇಷ್ಠತಳಿ'ಯ ಗೀಳುರೋಗ ನೋಡಿದರೆ ಸಾಕೇನೊ. ಆದಿವಾಸಿಗಳು, ಮೂಲ ನಿವಾಸಿಗಳು ಎಂದು ಈ ಹಿಂದೆಲ್ಲಾ ಇದ್ದ ಹೆಸರನ್ನು ಅಳಿಸಿಹಾಕಿ ಈ ಆರ್‌ಎಸ್‌ಎಸ್ 'ವನವಾಸಿ' ಹೆಸರನ್ನು ಚಾಲ್ತಿಗೆ ತರುತ್ತಿದೆ. ಮೂಲನಿವಾಸಿಗಳಿಂದ ಎಲ್ಲವನ್ನೂ ಕಿತ್ತುಕೊಂಡ ಪರಂಪರೆ ಯವರು ಅವರ ಹೆಸರನ್ನೂ ಕಿತ್ತುಕೊಳ್ಳಲು ನೋಡುತ್ತಿದೆ. ಕಾರಣ ಇಷ್ಟೆ: ಮೂಲನಿವಾಸಿಗಳು ಎಂದು ಚಾಲ್ತಿಯಲ್ಲಿ

ಇದ್ದಷ್ಟೂ ದಿನ ಇವರಿಗೆ ತಾವು ಹಿಂದೂ(ಸಿಂಧೂ)ಸ್ಥಾನಕ್ಕೆ ಪರಕೀಯರೇನೊ ಅನ್ನಿಸುತ್ತಲೇ ಇರುತ್ತದೆ. ಇದಕ್ಕೆ ಬಲಿಯಾಗಿ ಇತ್ತೀಚಿನ ರಾಖಿಗಡಿಯಲ್ಲಿ ನಡೆದ ಡಿಎನ್‌ಎ ಅಧ್ಯಯನದಲ್ಲಿ, ಹರಪ್ಪ ನಾಗರಿಕತೆಯ ಪ್ರಾಚೀನ ಪಳೆಯುಳಿಕೆಯ ಡಿಎನ್‌ಎ ಪ್ರಕಾರ– ಈ ಸಿಂಧೂ ನಾಗರಿಕತೆಯ ಜನರ ವಂಶಾವಳಿಗಳ ಒಳಗೆ ಆರ್ಯ ಅಥವಾ ವೈದಿಕ ವಂಶಾವಳಿ ಇಲ್ಲ ಎಂಬುದು ಜಗಜ್ಜಾಹೀರು ಆಗಿದೆ. ಇದಕ್ಕೆ ಬೆಚ್ಚಿದ ಆರ್‌ಎಸ್‌ಎಸ್ 'ಸಿಂಧೂ ನಾಗರಿಕತೆ' ಅನ್ನುವುದರ ಬದಲು 'ಸರಸ್ವತಿ ನಾಗರಿಕತೆ' ಎಂದು ಕಾಲೂ ಮಾಡುತ್ತಿದೆ. ಆಯ್ತು, ಆರ್ಯರು ಹೊರಗಡೆಯಿಂದ ಬಂದವರು ಎಂದರೆ ತಾನೇ ಏನಾಯ್ತು? ಭಾರತದ ಭೂಮಿಯು ತನ್ನಲ್ಲಿ ಹುಟ್ಟಿದ ಕಂದಮ್ಮಗಳನ್ನು ತನ್ನದೆಂದು ಅಪ್ಪಿಕೊಳ್ಳುತ್ತದೆ. ಜೊತೆಗೆ ಭಾರತದಲ್ಲಿ ದ್ರಾವಿಡ, ಆರ್ಯನ್, ಇಸ್ಲಾಂ, ಕ್ರಿಶ್ಚಿಯನ್ ಮುಂತಾದ ರಕ್ತಗಳೆಲ್ಲವೂ ಬೇರ್ಪಡಿಸಲಾಗದಂತೆ ಬೆರೆತು ಹೋಗಿದೆ. ಹೀಗಿರುವಾಗ ಆರ್‌ಎಸ್‌ಎಸ್‌ಗೆ ನೆಮ್ಮದಿಯಿಂದ ಇರಲು ಏನಾಗಿದೆ? ವರ್ತಮಾನದಲ್ಲಿ ಬದುಕಲು ಏನಾಗಿದೆ? ಆರ್ಯನ್ ತಳಿಯ ಗೀಳು ರೋಗಕ್ಕೆ ಆರ್‌ಎಸ್‌ಎಸ್ ಸಿಲುಕಿ ನರಳುತ್ತಿರುವ ರೋಗಿಷ್ಠ ಅನ್ನಿಸುತ್ತದೆ.

ಮತ್ತೂ ಹೇಳುವುದಾದರೆ, ಹಿಜಾಬ್, ಹಲಾಲ್, ಮಾರಾಟ ನಿಷೇಧ, ಆಜಾನ್ ಮುಂತಾದವುಗಳಲ್ಲಿ ದಾಂಧಲೆ ಎಬ್ಬಿಸುತ್ತಿರುವ ಶ್ರೀರಾಮಸೇನೆ, ಭಜರಂಗದಳ ಹುಡುಗರು ಯಾರು? ಇವರೆಲ್ಲಾ ಹೆಚ್ಚಾಗಿ ತಳ ಸಮುದಾಯದ ತರುಣ ಶಕ್ತಿ ಅಲ್ಲವೆ? ಇವರ ಶಕ್ತಿಗೆ ತಕ್ಕಂತೆ ಉದ್ಯೋಗ ನೀಡಿ ದೇಶವನ್ನು ಅಭಿವೃದ್ಧಿ ಮಾಡಬೇಕಿತ್ತಲ್ಲವೆ? ಆರ್‌ಎಸ್‌ಎಸ್ ಸಂತಾನ ಬಿಜೆಪಿ ಆಳ್ವಿಕೆಗೆ ಇದಾವುದೂ ಬೇಕಾಗಿಲ್ಲ. ಆರ್‌ಎಸ್‌ಎಸ್ ಬಿಜೆಪಿಗೆ ಶೂದ್ರರು ಕಾಲಾಳುಗಳಾಗಬೇಕು, ಅತಂತ್ರ ಸ್ಥಿತಿಯಲ್ಲೆ ಇರಬೇಕು, ಮತ್ತೆ ಇವರು ಚಾತುರ್ವರ್ಣದ ಪದ್ಧತಿಯಂತೆ ಸೇವಕರಾಗಿ ಉಳಿಯಬೇಕೆಂಬುದೂ ಸದ್ದಿಲ್ಲದೇ ಜರುಗುತ್ತಿದೆ. ಹಾಗೇ ಗುತ್ತಿಗೆ ನೌಕರರ ಸ್ಥಿತಿಯೂ ಇದೇ ಅಲ್ಲವೆ? ಹಾಗೇ ಭೂ ಸುಧಾರಣೆ ತಂದು 'ಉಳುವವನೇ ಹೊಲದೊಡೆಯ' ಕಾಯ್ದೆ ಕಿತ್ತು ಹಾಕುತ್ತಿರುವುದರಿಂದಲೂ ಕೂಡ ಮತ್ತೆ ಆಸ್ತಿರಹಿತ ಶೂದ್ರ ಸೇವಕ ಪದ್ಧತಿ ಜಾರಿಗೆ ತಂದಂತಾಗುವು ದಿಲ್ಲವೆ? ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೌಕರರನ್ನು ಭರ್ತಿ ಮಾಡದೆ, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದೆ, ಉದ್ಯೋಗಗಳನ್ನೆಲ್ಲ ಮೀಸಲಾತಿ ಇಲ್ಲದ ಖಾಸಗಿ ಬಾಯಿಗೆ ಹಾಕುತ್ತಿರುವುದು ಕೂಡ ಮೀಸ ಲಾತಿ ಪಡೆಯುವ ವರ್ಗಗಳನ್ನು ನಿರುದ್ಯೋಗಿಗಳನ್ನಾಗಿಸಿ

ಮತ್ತೆ ಶೂದ್ರ ಸೇವಕರನ್ನಾಗಿಸುವುದಲ್ಲವೆ? ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿ ಕೇಂದ್ರ ಸರ್ಕಾರವು ಕತ್ತರಿ ಹಾಕುವುದರಲ್ಲೂ ಇದನ್ನೇ ಕಾಣುತ್ತೇವೆ. ಸಂಶೋಧನಾ ಸಂಸ್ಥೆಯಾದ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE)ಯ ದತ್ತಾಂಶಗಳಂತೆ 2017 ಮತ್ತು 2022ರ ನಡುವೆ ಸುಮಾರು 2 ಕೋಟಿಗೂ ಹೆಚ್ಚು ಮಹಿಳೆಯರು ಕಾರ್ಮಿಕ ಪಡೆಯಿಂದ ಕಣ್ಮರೆಯಾಗಿದ್ದಾರೆ ಎಂದು ವರದಿಯಾಗಿದೆ. ಇದು ಸಹಜವೊ, ಆಕಸ್ಮಿಕವೊ ಅಥವಾ ಆರ್‌ಎಸ್‌ಎಸ್ ಹಿಡನ್ ಅಜೆಂಡಾ 'ಮಹಿಳೆಯರು ಮನೆಯಲ್ಲಿರಬೇಕು' ಎಂಬ ಕಾರ್ಯತಂತ್ರದ ಭಾಗವೊ? ಈ ಎಲ್ಲಾ ಪ್ರಶ್ನೆಗಳು, ಅನುಮಾನಗಳು ಏಳುತ್ತವೆ.

ಇಷ್ಟೆಲ್ಲಾ ನಡೆಯುತ್ತಿದೆ. ಶಿಕ್ಷಣವನ್ನೆ ಖಾಸಗಿ ಗೊಳಿಸುತ್ತಾ ಸಾರ್ವಜನಿಕ ಶಿಕ್ಷಣವನ್ನೆ ಕ್ಷೀಣ ಮಾಡುತ್ತಿದ್ದಾರೆ. ಇದರಿಂದ ಇಡೀ ಹಳ್ಳಿಗಾಡು ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣ ಕಣ್ಮರೆಯಾಗುತ್ತಿದೆ. ಮಕ್ಕಳ ಶಿಕ್ಷಣದಲ್ಲೂ ಪಂಕ್ತಿಭೇದದ ತಾರತಮ್ಯದ ಶಿಕ್ಷಣ! ಇವೆಲ್ಲಾ ಎಲ್ಲಿಗೆ ತಂದು ನಿಲ್ಲಿಸಬಹುದೆಂದರೆ, ಈ ಹಿಂದೆ ಚಾತುರ್ವರ್ಣ ಪದ್ಧತಿಯಲ್ಲಿ ಶೂದ್ರರಿಗೆ ಶಿಕ್ಷಣ ನಿಷಿದ್ಧ ಮಾಡಿದ್ದರಲ್ಲಾ ಅಲ್ಲಿಗೇ ತಂದು ನಿಲ್ಲಿಸುತ್ತದೆ. ಹೀಗೆಲ್ಲಾ ನಡೆಯುತ್ತಿದೆ. ಗೊತ್ತಿರುವುದು ಇಷ್ಟು,

ಗೊತ್ತಿಲ್ಲದಿರುವುದು ಇನ್ನೆಷ್ಟೊ ಎಂಬಂತಹ ವಾತಾವರಣವಿದೆ. ಏನು ಮಾಡಬೇಕು? ಹೇಗೆ ಮಾಡಬೇಕು? ಇದಕ್ಕೆ ಹೀಗೆ ಎಂದು ಹೇಳಬಹುದಾದ ಉತ್ತರಗಳಿವೆಯೆ? ಊರಿಗೆ ಕಳ್ಳರು ನುಗ್ಗಿದ್ದಾರೆ, ಏನು ಮಾಡಬೇಕು? ಹೇಗೆ ತಡೆಯ ಬೇಕು? ಎಲ್ಲಕ್ಕಿಂತಲೂ ಮೊದಲು ಊರಿಗೆ ಊರೇ ಎಚ್ಚರ ಗೊಳ್ಳುತ್ತದೆ. ರಾತ್ರಿ ಯುವಕರು ಮೊಹಲ್ಲಾ ಮೊಹಲ್ಲಾಗಳಲ್ಲಿ ಸರದಿ ಕಾವಲು ಕಾಯುತ್ತಾರೆ. ಮಹಿಳೆಯರು ಖಾರದ ಪುಡಿಯನ್ನು ಜೊತೆಯಲ್ಲಿಟ್ಟುಕೊಂಡಿರುತ್ತಾರೆ. ಈಗ ಈ ಎಚ್ಚರವೇ ಮೊದಲು ನಮಗೆಲ್ಲಾ ಬೇಕಾಗಿರುವುದು. ಯಾಕೆಂ ದರೆ, ಕಳ್ಳರು ನಾನಾ ವೇಷದಲ್ಲಿ ಬರಬಹುದು, ದೇವಸ್ಥಾನ, ಗುಡಿ ಜೀರ್ಣೋದ್ಧಾರ ಅಂತ ಬರಬಹುದು. ಸುಳ್ಳು ಸುದ್ದಿ ಹಬ್ಬಿಸಬಹುದು. ಭಜನೆ ಮಾಡಿಸಬಹುದು. ಜನರು ಯಾವು ದಕ್ಕೆ ಭಾವನಾತ್ಮಕವಾಗಿ ಹೆಚ್ಚು ಸ್ಪಂದಿಸುವರೋ ಅಂಥವುಗಳನ್ನೆ ಗಾಳಕ್ಕೆ ಸಿಕ್ಕಿಸಿ ಮೀನು ಹಿಡಿಯುವಂತೆ ಸಮುದಾಯವನ್ನು ಹಿಡಿದುಕೊಳ್ಳಬಹುದು. ಇದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ, ಮೊದಲು ಆ ಸಂಚನ್ನು ಕಾಣಬೇಕಾಗಿದೆ. ಅದಕ್ಕೆ ಎಚ್ಚರ ಬೇಕಾಗಿದೆ ಎಲ್ಲರಲ್ಲೂ. ಹಾಗೂ ಅಲ್ಲಲ್ಲೆ ಇರುವ ವಿವೇಕ ವಿವೇಚನಾಶಾಲಿಗಳು ಈಗಲಾದರೂ ಸರಿತಪ್ಪುಗಳನ್ನು ಮಾತಾಡಬೇಕಾಗಿದೆ. ಪ್ರೀತಿ, ಸಹನೆ, ನ್ಯಾಯ ಇತ್ಯಾದಿ ಮಾತುಗಳು ಸಮಾಜದ ಒಳಗಿಂದಲೇ ಕೇಳಬೇಕಾಗಿದೆ.

4

ಈ ಹಿನ್ನೆಲೆಯಲ್ಲಿ ಮತಾಂತರ ನಿಷೇಧ ಕಾಯ್ದೆಯ ಮರ್ಮ

ಕರ್ನಾಟಕ ಸರ್ಕಾರ ಇತ್ತೀಚೆಗೆ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ 2021' ಅನ್ನು ವಿಧಾನ ಸಭೆಯಲ್ಲಿ ಮಂಡಿಸಿ, ಆತುರಾತುರವಾಗಿ ಅನುಮೋದನೆಯನ್ನು ಪಡೆದುಕೊಂಡು, ಸುಗ್ರೀವಾಜ್ಞೆ ಮೂಲಕ ಕಾಯ್ದೆಯನ್ನಾಗಿಸಿ ಜಾರಿ ಮಾಡಲು ಸಚಿವ ಸಂಪುಟದ ಒಪ್ಪಿಗೆಯೂ ಸಿಕ್ಕಿ ರಾಜ್ಯಪಾಲರು ಅಂಕಿತವನ್ನೂ ಹಾಕಿ ಈಗ ಕಾಯ್ದೆ ಆಗಿದೆ. ಈ ಕಾಯ್ದೆಗೆ 'ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣೆ' ಎಂಬ ಹೆಸರಿದೆ. ಆದರೆ ಅದರ ಒಳಹೊಕ್ಕು ನೋಡಿದರೆ, ಇದರೊಳಗೆ ಮತಾಂತರಕ್ಕೆ ಅಡೆತಡೆ ನಿಷೇಧಗಳೇ ತುಂಬಿ ತುಳುಕುತ್ತಿವೆ. ಈ ಕಾಯ್ದೆಯಲ್ಲಿ ಧಾರ್ಮಿಕವೂ ಇಲ್ಲ, ಸ್ವಾತಂತ್ರ್ಯವೂ ಇಲ್ಲ, ಹಕ್ಕೂ ಇಲ್ಲ, ಸಂರಕ್ಷಣೆಯೂ ಇಲ್ಲ. 'ಮುಕ್ತಿ' ಹೆಸರಿನಲ್ಲಿ 'ಕೊಲ್ಲುವ' ಕ್ರಿಯೆ ಇಲ್ಲಿ ನಡೆದಿದೆ. ಅದಕ್ಕಾಗೇ ಈ

'ಧಾರ್ಮಿಕ ಸ್ವಾಂತಂತ್ರ್ಯ ಹಕ್ಕು ಸಂರಕ್ಷಣೆ' ಕಾಯ್ದೆಯ ಒಳಾರ್ಥಕ್ಕೆ ಅನುಗುಣವಾಗಿ ಇದನ್ನು ಜನಪ್ರಿಯವಾಗಿ 'ಮತಾಂತರ ನಿಷೇಧ ಕಾಯ್ದೆ' ಎಂತಲೇ ಎಲ್ಲರೂ ಕರೆಯತೊಡಗಿದ್ದಾರೆ!

ಭಾರತದ ಇತಿಹಾಸದಲ್ಲೇ ಎಲ್ಲೂ ಯಾವ ಪಾಳೇಗಾರರಾಗಲೀ ಯಾವ ರಾಜರಾಗಲೀ ಅಥವಾ ಯಾವ ಚಕ್ರವರ್ತಿಯೇ ಆಗಲಿ ಬಹುಶಃ ಮತಾಂತರ ನಿಷೇಧ ಕಾನೂನು ಜಾರಿಮಾಡಿದ ಉದಾಹರಣೆಗಳು ಅಷ್ಟಾಗಿ ಇಲ್ಲ. ಎಲ್ಲಾ ಧರ್ಮ, ಮತ, ಪಂಥ, ಆಧ್ಯಾತ್ಮಿಕ ಪ್ರಯೋಗಗಳ ನೆಲ ಭಾರತ. ಇದೇ ಭಾರತದ ಸಂಸ್ಕೃತಿ. ಇದೇ ಭಾರತದ ಪರಂಪರೆ. ಇದನ್ನೇ ಭಾರತೀಯತೆ ಎಂದು ಕರೆಯುತ್ತಿರುವುದೂ ಕೂಡ. ಇತಿಹಾಸ ತಜ್ಞರು 'ಯುದ್ಧ ವೈವಾಹಿಕ ಸಂಬಂಧದಲ್ಲಿ ಕೊನೆಗೊಳ್ಳುತ್ತದೆ' ಎಂಬ ಮಾತು ಹೇಳುತ್ತಾರೆ. ಅಷ್ಟೇಕೆ, ಭಾರತದ ಪುರಾಣಗಳಲ್ಲೂ ಕೂಡ ದೇವಾನುದೇವತೆಗಳು ಯುದ್ಧ ಮಾಡಿ ಸೋತು ಗೆದ್ದು ಕೊನೆಗೆ ವೈವಾಹಿಕ ಸಂಬಂಧ ಬೆಳೆಸಿ ಪರಸ್ಪರ ಬೆರೆತು, ಒಂದಾಗಿ ಬಾಳುತ್ತಿದ್ದಾರೆ. ಆದರೆ ಈ 'ದೈವಭಕ್ತ' ಎನ್ನಿಸಿಕೊಂಡ ಮನುಷ್ಯರು ಮಾತ್ರ ಅಸಹನೆ, ದ್ವೇಷ, ಜಾತಿಮತಧರ್ಮಾಂಧತೆಯ ಮೇಲು

ಕೀಳೆಂಬ ಗಟಾರದಲ್ಲೇ ಜೀವಿಸುತ್ತಿದ್ದಾರೆ. ಚಾತುರ್ವರ್ಣದ ಸಾಮ್ರಾಜ್ಯವನ್ನು ಸ್ಥಾಪಿಸುವ ಗುರಿಗಾಗಿ ಟೊಂಕ ಕಟ್ಟಿರುವ ಆರ್‌ಎಸ್‌ಎಸ್ ಆಶಯಗಳನ್ನು ತನ್ನೊಳಗೆ ಬಚ್ಚಿಟ್ಟುಕೊಂಡ ಚುನಾಯಿತ ಬಿಜೆಪಿ ಸರ್ಕಾರವು, ಈಗ ಆ ಭೂತಕಾಲದ ದಿಕ್ಕಲ್ಲೆ ಕಾರ್ಯ ನಿರ್ವಹಿಸುತ್ತಿದೆ. ಆ ಭೂತಕಾಲದ ಸಂಚಲ್ಲೆ ಇದೂ ಒಂದು.

ಈಗ, ಈ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣೆ ಹೆಸರಿನಲ್ಲಿ ಜಾರಿಗೊಳಿಸಬೇಕೆಂದಿರುವ ಕಾಯ್ದೆಯಲ್ಲಿ ಸರ್ಕಾರ ಏನೆಲ್ಲಾ ಅಡೆತಡೆಗಳನ್ನು ಹಾಕಿದೆ ಎಂದರೆ, ಮತಾಂತರವಾಗಲು ಬಯಸುವ ವ್ಯಕ್ತಿ ಏಳು ಕೆರೆ ನೀರು ಕುಡಿಯಬೇಕಾಗುತ್ತದೆ. ಮತಾಂತರವಾಗಲು ಬಯಸುವವರು ಕನಿಷ್ಟ 30 ದಿವಸಗಳ ಮುಂಚಿತವಾಗಿ ಜಿಲ್ಲಾ ದಂಡಾಧಿಕಾರಿಯವರಿಗೆ 'ನಮೂನೆ–I'ರಲ್ಲಿ ಘೋಷಣೆ ಮಾಡಬೇಕಂತೆ. ಹಾಗೇ ಮತಾಂತರದ ವಿಧಿ–ವಿಧಾನಗಳನ್ನು ನೆರವೇರಿಸುವ ಧಾರ್ಮಿಕ ಮುಖಂಡರು ಕೂಡ 'ನಮೂನೆ II' ರಲ್ಲಿ ನೋಟೀಸ್ ನೀಡಬೇಕಂತೆ. ಆಮೇಲೆ ಆಕ್ಷೇಪಣೆಗಳನ್ನೂ ಆಹ್ವಾನಿಸುತ್ತಾರೆ. ಯಾರಾದರೂ ನೆಂಟರಿಷ್ಟರು, ನೆರೆಹೊರೆಯವರು, ಸಹೋದ್ಯೋಗಿಗಳು ಆಕ್ಷೇಪಣೆ ಸಲ್ಲಿಸಬಹುದಂತೆ! ಇದೇನು ವಿಚಿತ್ರ? ಬಲವಂತವಾಗಿ,

ಆಮಿಷ ತೋರಿಸಿ ಮತಾಂತರವಾಗಿದ್ದರೆ ಅದಕ್ಕೆ ಆಕ್ಷೇಪಣೆ ಸಲ್ಲಿಸಬೇಕಾದವರು, ಯಾರು ಮತಾಂತರಗೊಂಡಿರುವರೋ ಅವರು ಮಾತ್ರವೇ ಅಲ್ಲವೆ? ಈ ಸರ್ಕಾರ, ಜನರ ಜೀವನದ ಜೊತೆ ಹಾಗೂ ಭಾರತದ ಸಂವಿಧಾನದ ಜೊತೆ ಚೆಲ್ಲಾಟವಾಡುತ್ತಿದೆಯೇ ಹೇಗೆ?

ಜೊತೆಗೆ, ಈ ಕಾಯ್ದೆಯಲ್ಲಿರುವ ಯಾರು ಮತಾಂತರ ಮಾಡುತ್ತಾರೊ ಅವರಿಗೆ ವಿಧಿಸುವ ಶಿಕ್ಷೆಯ ಪ್ರಮಾಣ ನೋಡಿದರೂ ಬಹುಶಃ ಯಾರೂ ಮತಾಂತರ ಮಾಡಲು ಮುಂದೆ ಬರಲಾರರು. ಸ್ವ ಇಚ್ಛೆಯಿಂದ ಮತಾಂತರವಾದರೂ ಅದನ್ನು ತಪ್ಪು ನಿರೂಪಣೆ, ಬಲವಂತ, ವಂಚನೆ, ಅನುಚಿತ ಪ್ರಭಾವ, ಒತ್ತಾಯ, ಆಮಿಷ ಒಡ್ಡಿ ಮತಾಂತರ ಮಾಡಿದ್ದಾರೆಂದು ತಿರುಚಿ, ಅದೆಲ್ಲವನ್ನೂ ಮತಾಂತರ ಮಾಡಿದವರ ಮೇಲೆ ಆರೋಪಿಸಿ ಚಿತ್ರಹಿಂಸೆ ನೀಡುವ ಸಾಧ್ಯತೆಗಳೇ ಹೆಚ್ಚಿದೆ. ಹೀಗಾದರೆ ಸ್ವ ಇಚ್ಛೆಯಿಂದ ಮತಾಂತರವಾಗಲು ಬಯಸುವವರು ಏನು ಮಾಡಬೇಕು? ಬಹುಶಃ ಉಳಿದಿರುವ ಒಂದೇ ದಾರಿ ಎಂದರೆ ಸ್ವ ಇಚ್ಛೆಯಿಂದ ಮತಾಂತರವಾಗಲು ಬಯಸುವವರು ಜಿಲ್ಲಾಧಿಕಾರಿಗಳಿಗೆ ನಮೂನೆ 1ರಲ್ಲಿ ಅರ್ಜಿ ಸಲ್ಲಿಸಿ 'ನೀವೇ ನಮ್ಮ ಮತಾಂತರಕ್ಕೆ ವ್ಯವಸ್ಥೆ ಮಾಡಿ' ಎಂದು ಒತ್ತಾಯಿಸುವುದಷ್ಟೇ ಉಳಿದಿರುವುದು!

ಈ ಮತಾಂತರ ನಿಷೇಧ ಕಾಯ್ದೆಯಲ್ಲಿ ಅಸ್ವಸ್ಥ ಚಿತ್ತರು, ಅಪ್ರಾಪ್ತರ ಮತಾಂತರಕ್ಕೆ ನಿಷೇಧ ಕಾನೂನು ಅನ್ವಯಿಸಿದ್ದರೆ ಅರ್ಥ ಮಾಡಿಕೊಳ್ಳಬಹುದಿತ್ತು. ಆದರೆ, ಈ ಕಾಯ್ದೆಯಲ್ಲಿ ಮಹಿಳೆಯರು, ದಲಿತರು ಮತಾಂತರವಾದರೆ ಅವರನ್ನು ಈ ಸರ್ಕಾರ ಪರಿಗಣಿಸಿರುವ ವೈಖರಿಯನ್ನು ನೋಡಿದರೆ ಅದು ಮಹಿಳೆಯರು ಮತ್ತು ದಲಿತರ ಘನತೆಗೆ ಧಕ್ಕೆ ತರುವಂತಿದೆ. ಮಹಿಳೆಯರು, ದಲಿತರು, ಅಸ್ವಸ್ಥ ಚಿತ್ತರು, ಅಪ್ರಾಪ್ತರನ್ನು ಒಂದೇ ಎಂಬಂತೆ ನೋಡಲಾಗಿದೆ. ಮಹಿಳೆಯರು ಮತ್ತು ದಲಿತರನ್ನು ಮತಾಂತರ ಮಾಡುವವರಿಗೆ ನೀಡುವ ಹೆಚ್ಚು ಶಿಕ್ಷೆಯ ಪ್ರಮಾಣದಲ್ಲಿ ಇದು ಸ್ಪಷ್ಟವಾಗಿದೆ. ಹಾಗಾದರೆ ಮಹಿಳೆಯರು, ದಲಿತರು ಅಸ್ವಸ್ಥ ಚಿತ್ತರೆ? ಅಪ್ರಾಪ್ತರೆ? ಏನು ಈ ಸರ್ಕಾರದ ಗ್ರಹಿಕೆ? ಮಹಿಳೆಯರೆಂದರೆ, ದಲಿತರೆಂದರೆ, ಬುದ್ಧಿಹೀನರು, ಅಪ್ರಾಪ್ತರು, ಸ್ವಂತಿಕೆ ಇಲ್ಲದವರು, ಇವರಿಗೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇಲ್ಲ ಎಂದು ಈ ಸರ್ಕಾರ ಅಂದುಕೊಂಡಂತಿದೆ. ಆದರೆ, ಈ ಕಾಯ್ದೆ ಜಾರಿ ಮಾಡಿದ ಈ ಸರ್ಕಾರ ಒಂದನ್ನು ನೆನಪಿಟ್ಟುಕೊಳ್ಳಬೇಕು. ಏನೆಂದರೆ, ಈ ಬಹುಸಂಖ್ಯಾತ ಮಹಿಳಾ ಮತ್ತು ದಲಿತ ಮತದಾರರ ಮತ ಪಡೆದೇ ಇವರು ಶಾಸಕರೊ ಆಡಳಿತ ಪಕ್ಷವೊ ಆಗಿದ್ದಾರೆಂಬುದನ್ನು ನೆನಪಲ್ಲಿಟ್ಟುಕೊಳ್ಳಬೇಕು. ಆದರೆ ಈ ಕೃತಘ್ನರು ಮಾಡಿದ್ದೇನು?

ತಮ್ಮನ್ನು ಆಯ್ಕೆ ಮಾಡಿದವರನ್ನೇ ತಾರತಮ್ಯಕ್ಕೊಳಪಡಿಸಿ ಅವರನ್ನು ಎರಡನೆಯ ದರ್ಜೆ ಪ್ರಜೆಗಳನ್ನಾಗಿಸಿ ಅವಮಾನ ಮಾಡಿದ್ದಾರೆ. ಹೀಗೆ ಅವಮಾನಿಸಿದವರನ್ನು ಮುಂಬರುವ ಚುನಾವಣೆಗಳಲ್ಲಿ ಹುಟ್ಟಡಗಿಸುವ ಮೂಲಕ ಮಹಿಳೆಯರೂ ದಲಿತರೂ ತಮಗೆ ಅಂಟಿಸಿದ ಕಳಂಕವನ್ನು ತೊಳೆದುಕೊಳ್ಳ ಬೇಕಾಗಿದೆ. ಇಂಥ ಶಾಸಕರಿಗೆ ಸ್ವಲ್ಪ ಬುದ್ಧಿ ಕೊಡಬೇಕಾಗಿದೆ, ಸ್ವಂತಿಕೆ ತಂದುಕೊಡಬೇಕಾಗಿದೆ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನೂ ತಂದುಕೊಡಬೇಕಾಗಿದೆ. ಈ ಅಪ್ರಾಪ್ತರನ್ನು ಪ್ರಬುದ್ಧ ಮಾಡಬೇಕಾಗಿದೆ. ಶಾಸನ ಸಭೆಯಲ್ಲಿ ಚರ್ಚೆ ಮಾಡದೆ ಕೈ ಎತ್ತುವ ಇಂತಹ ಶಾಸಕರನ್ನು ಮಹಿಳೆಯರೂ ದಲಿತರೂ ಎಚ್ಚರಗೊಂಡು ವಿಚಾರಿಸಿಕೊಳ್ಳಬೇಕಾಗಿದೆ.

ಇದನ್ನೆಲ್ಲಾ ನೋಡಿದರೆ, ಸರ್ಕಾರ ಮಾಡ ಹೊರಟಿರುವುದು ಏನನ್ನು? ಬಾಯಲ್ಲಿ ಧಾರ್ಮಿಕ ಹಕ್ಕು ಸ್ವಾತಂತ್ರ್ಯ ಹೇಳಿ ಕ್ರಿಯೆಯಲ್ಲಿ ಮತಾಂತರ ನಿಷೇಧ ಮಾಡಿ, ಒಂದೇ ಏಟಿಗೆ ಸಂವಿಧಾನ ನೀಡಿರುವ ವ್ಯಕ್ತಿ ಸ್ವಾತಂತ್ರ್ಯದ ಕಾಲು ಮುರಿದಿದ್ದಾರೆ. ಜೊತೆಗೆ ಸಂವಿಧಾನದಲ್ಲಿ ನೀಡಿರುವ "ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಅವಲಂಬಿಸಿ, ಆಚರಿಸಿ, ಪ್ರಚಾರ ಮಾಡುವ ಧಾರ್ಮಿಕ ಸ್ವಾತಂತ್ರ್ಯ"ದ ಹಕ್ಕಿನ ಗಂಟಲು ಹಿಚುಕಿದ್ದಾರೆ. ಜೊತೆಗೆ

ಮಹಿಳೆಯರು ಮತ್ತು ದಲಿತರನ್ನು ಎರಡನೆಯ ದರ್ಜೆ ಪ್ರಜೆಗಳನ್ನಾಗಿಸಿ ಅವಮಾನಿಸಿದ್ದಾರೆ!

ಮತಾಂತರ ನಿಷೇಧಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಒಂದು ಪ್ರಹಸನವೂ ನಡೆಯಿತು. ಸದನದಲ್ಲೇ ಬಟ್ಟೆ ಬಿಚ್ಚಿ ಪ್ರದರ್ಶನ ಮಾಡಿದ ಖ್ಯಾತಿಯ ಹೊಸದುರ್ಗ ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ತನ್ನ ತಾಯಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿರುವುದನ್ನು ಬಣ್ಣಿಸುತ್ತಾರೆ. ಆ ತಾಯಿ ಯಾಕೆ ಕ್ರಿಸ್ತನ ಮೊರೆ ಹೋಗಿರಬಹುದು ಎಂಬ ಪ್ರಶ್ನೆಯು ಯಾರ ಮನಸ್ಸಿಗೂ ಬರುವುದಿಲ್ಲ. ತಾನು ಹೆತ್ತ ಗೂಳಿಹಟ್ಟಿ ಶೇಖರ್ ಎಂಬ ತನ್ನ ಮಗನ ಅವಾಂತರಗಳಿಗೆ ಬೇಸತ್ತು ನೊಂದು ಸಾಂತ್ವನಕ್ಕಾಗಿ ಆ ತಾಯಿ ಕ್ರಿಸ್ತನ ಮೊರೆ ಹೋಗಿರಬಹುದಲ್ಲ? ಯಾರೂ ಆ ತಾಯಿಯ ಕಡೆ ನೋಡಲೇ ಇಲ್ಲ! ಆಯ್ತು, ಆ ನೊಂದ ತಾಯಿಗೆ ಸಂವಿಧಾನದಲ್ಲಿ ನೀಡಿರುವ “ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಅವಲಂಬಿಸಿ, ಆಚರಿಸಿ, ಪ್ರಚಾರ ಮಾಡುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು” ಇಲ್ಲವೆ? ನಮ್ಮ ಶಾಸಕರು ಯಾರೊಬ್ಬರೂ ಇದನ್ನು ಪರಿಗಣಿಸಲೇ ಇಲ್ಲ. ಈಗ ಜಾರಿ ಆಗಿರುವ ಕಾಯ್ದೆಯಲ್ಲಿ ಮನುಧರ್ಮ ಶಾಸ್ತ್ರದ ‘ಹೆಣ್ಣು ಮಗಳಾಗಿದ್ದಾಗ ತಂದೆಯ

ಅಧೀನ, ಮದುವೆಯಾದ ಮೇಲೆ ಗಂಡನ ಅಧೀನ, ವಿಧವೆಯಾದರೆ ಮಗನ ಅಧೀನ' ಎಂಬ ಮನುಧರ್ಮದ ಭೂತಕಾಲದ ವಾಸನೆ ಬಡಿಯುತ್ತಿದೆ. ಒಟ್ಟಿನಲ್ಲಿ ಇಲ್ಲಿ ನಡೆದಿರುವುದು 'ಸಂವಿಧಾನದ ಸಂಹಾರ' ಹಾಗೂ ಇದರ ಜೊತೆಗೆ 'ಮನುಧರ್ಮ ಶಾಸ್ತ್ರದ ಪ್ರತಿಷ್ಠಾಪನೆ'.

ಇಲ್ಲೂ, ಆರ್ಥಿಕ ದುರ್ಬಲ ವರ್ಗದ (EWS) ಮೀಸಲಾತಿಗೆ ಸಂಬಂಧಪಟ್ಟಂತೆ ನೋಡಿದರೂ ಇಲ್ಲೂ ಕೂಡ ಇನ್ನೊಂದು ಬಗೆಯಲ್ಲಿ ಸಂವಿಧಾನ ಸಂಹಾರ ಹಾಗೂ ಮನುಧರ್ಮದ ಪ್ರತಿಷ್ಠಾಪನೆ ಜೊತೆಜೊತೆಗೇ ಜರುಗಿರುವುದು ಕಾಣಿಸುತ್ತದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಾದ ಮೀಸ ಲಾತಿಗೆ– ಸಾಮಾಜಿಕವಾಗಿ ಹಿಂದುಳಿದಿರುವಿಕೆ, ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ, ಹಾಗೂ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಪ್ರಾತಿನಿಧ್ಯದ ಕೊರತೆ– ಇವು ಅಳತೆಗೋಲಾಗಿದ್ದವು. ಇದರಲ್ಲೊಂದು ನ್ಯಾಯ ಇತ್ತು. ಇದಕ್ಕೊಂದು ಚಾರಿತ್ರ್ಯ ಇತ್ತು. ಹೀಗಿರುವಾಗ ಆರ್‌ಎಸ್‌ಎಸ್ ಸಂತಾನ, ಬಿಜೆಪಿಯ ಏಕವ್ಯಕ್ತಿ ನಾಯಕತ್ವದ ಪ್ರಧಾನಿ ಮೋದಿಯವರು ಒಂದೇ ಏಟಿಗೆ EWS ಅಂದರೆ, 'ಆರ್ಥಿಕವಾಗಿ ಹಿಂದುಳಿದ ವರ್ಗ'ಕ್ಕೆ 10% ಮೀಸಲಾತಿ ಜಾರಿಗೆ ತಂದುಬಿಟ್ಟರು. ಇದರಿಂದ ಈ ಹಿಂದೆ ಮೀಸಲಾತಿ ಪರಿಕಲ್ಪನೆಗೆ ಇದ್ದ 'ನ್ಯಾಯ' ಅನ್ನುವುದು ನೆಗೆದು ಬಿತ್ತು. ಅದಕ್ಕಿದ್ದ ಚಾರಿತ್ರ್ಯವೂ ಹರಣವಾಯ್ತು.

ಸ್ವಲ್ಪ ಹಿಂದಕ್ಕೆ ಹೋದರೆ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಮಂಡಲ್ ಆಯೋಗವನ್ನು ವಿರೋಧಿಸಿ ನಡೆದ ಉಗ್ರ ಪ್ರತಿಭಟನೆಯಲ್ಲಿ ಆರ್‌ಎಸ್‌ಎಸ್‌ನ ಛೂ ಗುಂಪುಗಳು ಮುಂಚೂಣಿಯಲ್ಲಿದ್ದವು. ಆಗ ಒಂದು ಅಮಾಯಕ ಜೀವದ ಸಾವೂ ಸಂಭವಿಸಿತು. ಇಂತಹ ಹಿನ್ನೆಲೆಯ ಮೋದಿಯವರು ಪ್ರಧಾನಿಯಾದ ಮೇಲೆ EWS ಗೆ ಮೀಸಲಾತಿ ಜಾರಿ ಮಾಡಿ ಸಂವಿಧಾನಕ್ಕೆ ಒಳೇಟು ನೀಡಿದರು. ಇವರ ಉದ್ದೇಶ ಇಷ್ಟೆ: ಈಗಿರುವ ಸಂವಿಧಾನ ವನ್ನು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ ಎಂಬಂತೆ ಮಾಡುವುದು. ಅದಕ್ಕಾಗೇ ಯಾವ ವರ್ಗವು ಸಾಮಾಜಿಕವಾಗಿ ಉಳಿದೆಲ್ಲಾ ವರ್ಗಗಳಿಗಿಂತಲೂ ಮುಂದುವರೆದಿದೆಯೋ, ಶಿಕ್ಷಣ ಮತ್ತು ಉದ್ಯೋಗ ಪ್ರಾತಿನಿಧ್ಯದಲ್ಲೂ ಅತಿ ಹೆಚ್ಚು ಪ್ರಾತಿನಿಧ್ಯ ಪಡೆದಿದೆಯೋ, ಅಂತಹ EWS ವರ್ಗವು ದೇಶದ ಜನಸಂಖ್ಯೆಯಲ್ಲಿ ಕೇವಲ ಶೇ.5ರಷ್ಟು ಮಾತ್ರವಿದ್ದರೂ ಅದಕ್ಕೆ ಶೇ.10ರಷ್ಟು ಮೀಸಲಾತಿ ನೀಡುವ ಮೂಲಕ ಅವಕಾಶ ಹೆಚ್ಚು ಇರುವವರಿಗೇ ಮತ್ತಷ್ಟು ಅವಕಾಶ ದಕ್ಕುವಂತೆ ನಮ್ಮ ಪ್ರಧಾನಿ ಮೋದಿಯವರು ಮಾಡಿಬಿಟ್ಟರು! ಈ EWS ಮೀಸಲಾತಿ ಕಾಣಿಕೆಯು ಮನುಧರ್ಮಶಾಸ್ತ್ರದ ಆಶಯ ದಂತೆ, ಅಂದರೆ ಹೆಚ್ಚು ಮೇಲ್ಪಟ್ಟ ಸ್ತರದವರಿಗೆ ಹೆಚ್ಚು ಸಲ್ಲಬೇಕು ಎಂಬ ನೀತಿಗೆ ಅನುಗುಣವಾಗಿದೆ! ಇದಕ್ಕೆ ಶಾಸ್ತ್ರ

ಕೇಳಬೇಕಾಗಿಲ್ಲ, ಮನುಧರ್ಮಶಾಸ್ತ್ರವನ್ನು ವರ್ತಮಾನ ಮಾಡಲು ಹೊರಟಿದ್ದಾರೆ. ಅದಕ್ಕಾಗಿ ಈಗ ಈ ಆರ್‌ಎಸ್‌ಎಸ್ ಮತ್ತು ಅದರ ಪರಿವಾರಗಳು ಎಂತಹ ವಾತಾವರಣವನ್ನು ಸೃಷ್ಟಿಸಿದ್ದಾರೆಂದರೆ, ಸರ್ಕಾರದ ಇಂತಹ ಕಾನೂನುಗಳು ಸರಿಯಾಗಿಲ್ಲ ಅಂದರೂ, ಹಾಗೆ ಅಂದವರನ್ನು ದೇಶದ್ರೋಹಿಗಳೆಂದು ಆರ್‌ಎಸ್‌ಎಸ್‌ನ ಕೂಗುಮಾರಿ•ಗಳ ಗುಂಪು ಅಬ್ಬರಿಸುತ್ತಿದೆ. ಇಂತಹ ವಾತಾವರಣದಲ್ಲಿ ಭಾರತ ನರಳುತ್ತಿದೆ.

• ಕೂಗುಮಾರಿಯು ಮನೆಮುಂದೆ ಬಂದು ಕೂಗಿದಾಗ ಅದಕ್ಕೆ 'ಓ'ಗೊಟ್ಟರೆ ಕೂಗುಮಾರಿಗೆ ಸ್ಪಂದಿಸಿದರೆ, ಅವರು ರಕ್ತ ಕಾರಿಕೊಂಡು ಸಾಯುತ್ತಾರೆ ಎನ್ನುವುದು ನಮ್ಮ ಜನಪದರ ನಂಬಿಕೆ. ಅದಕ್ಕಾಗಿ 'ನಾಳೆ ಬಾ' ಅಂತ ಬಾಗಿಲ ಮುಂದೆ ಬರೆದಿರುತ್ತಾರೆ.

ಈಗ

ಈಗ ನಾವೇನು ಮಾಡಬೇಕು? ಅದಕ್ಕೂ ಮೊದಲು ಒಂದು ವಿದ್ಯಮಾನ ಗಮನಿಸಬೇಕು. ಏನು ಚೋದ್ಯ! ಅಸಮಾನತೆ, ತಾರತಮ್ಯದ ಸಮಾಜವನ್ನು ಕಟ್ಟುತ್ತಿರುವ ಆರ್‌ಎಸ್‌ಎಸ್ ಮತ್ತು ಅದರ ನೂರೊಂದು ಮರಿ ಸಂತಾನಗಳು ಒಡಕಿಲ್ಲದೆ ಒಗ್ಗಟ್ಟಾಗಿ ದುಡಿಯುತ್ತಿವೆ. ಇದರ ಮರ್ಮವೇನು? ಇದರ ಮರ್ಮದಲ್ಲಿ ಅಂಥದೇನೂ ಮರ್ಮ ಇಲ್ಲ. ಅಲ್ಲಿರುವುದು ಅದೇ ಆ ಮೂರು ಮತ್ತೊಂದು ಭೂತಕಾಲದ ಹಿನ್ನಡೆಯ ನಂಬಿಕೆಗಳು– ಚಾತುರ್ವರ್ಣ ಸಮಾಜ, ಮನುಧರ್ಮಶಾಸ್ತ್ರ, ಆರ್ಯನ್ ಶ್ರೇಷ್ಠ ತಳಿ, ಭಾರತದ ಸಂವಿಧಾನದ ಧ್ವಂಸ ಇವಷ್ಟೆ ಅದಕ್ಕಿರುವುದು. ಈ ಮೂರು ಮತ್ತೊಂದು ಭೂತಕಾಲದ ಹಿನ್ನಡೆಯ ನಂಬಿಕೆಗಳನ್ನು ಆರ್‌ಎಸ್‌ಎಸ್ ಉಸಿರಾಟಕ್ಕೇನೆ ಕಸಿ ಮಾಡುತ್ತದೆ. ಅದಕ್ಕಾಗಿ ಮೊದಲು ವಿವೇಚನಾಶಕ್ತಿಯನ್ನು ನಾಶಮಾಡುತ್ತದೆ.

ಇದನ್ನು ಆರ್‌ಎಸ್‌ಎಸ್ ಗುರು ಗೋಲ್ವಾಲ್ಕರ್ ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ವಿವೇಚನಾಹೀನವಾದ ಹಾಗೂ ಪ್ರಶ್ನೆ ಮಾಡದ ನಂಬಿಕೆಗಳ ಸಂಘಟನೆಯೊಂದು ಸಮ್ಮೋಹನಕ್ಕೆ ಒಳಗಾದಂತೆ ಮೇಲಿನ ಅಪ್ಪಣೆಯಂತೆ 'ಮಂದೆ'ಯಂತೆ ವರ್ತಿಸುತ್ತದೆ.

ಆದರೆ ಇನ್ನೊಂದು ಕಡೆ? ಅಂದರೆ ಸಮಾಜವನ್ನು ಮುನ್ನಡೆಗೆ ಒಯ್ಯಬೇಕೆಂದಿರುವ ಸೈದ್ಧಾಂತಿಕತೆ, ವೈಚಾರಿಕತೆ ಮತ್ತು ಪ್ರಶ್ನಿಸಿ ತದನಂತರ ನಂಬುವ ಕಡೆ? ಇವು ಹೊಸ ಹೊಸ ಆಲೋಚನೆಗಳನ್ನು ಹುಟ್ಟು ಹಾಕಲೂಬಹುದು. ಆದರೆ ಇಂತಹ ಆಶಯಗಳ ಸಂಘಟನೆಗಳಲ್ಲಿ ಛಿದ್ರತೆ ಒಳಗೆ ಛಿದ್ರತೆ ಜರುಗುತ್ತಲೇ ಇದೆ. ಆದರೆ ಇಂದು ಸಮಾಜವನ್ನು ಹಿನ್ನಡೆಗೆ ದೂಕುತ್ತಿರುವ ಆರ್‌ಎಸ್‌ಎಸ್ ಪರಿವಾರ ಶಕ್ತಿಗಳು ಪ್ರಬಲವಾಗಿರುವ ಸಂಕಷ್ಟ ಸಮಯದಲ್ಲಿ, ಯಥಾಸ್ಥಿತಿವಾದಿ ಗಳಾದರೂ ಪ್ರಬಲವಾಗಿಲ್ಲದ ಈ ಕಾಲಮಾನದಲ್ಲಿ, ಸಮಾಜ ವನ್ನು ಮುನ್ನಡೆಗೆ ಒಯ್ಯಬೇಕೆಂದಿರುವ ಸಂಘ/ ಸಂಘಟನೆ/ ಪಕ್ಷಗಳ ಮೇಲೆ ಹೆಚ್ಚು ಹೊಣೆಗಾರಿಕೆ ಇರುತ್ತದೆ. ಇಂದು, ಈ ಮುನ್ನಡೆಯವರ ಮುಂದಿರುವ ವಿಶೇಷ ಹೊಣೆಗಾರಿಕೆ ಎಂದರೆ, **ಬೃಹತ್ ಎಂಬ ಭ್ರಮೆ ಹುಟ್ಟಿಸಿರುವ, ಆದರೆ ನಿಜದಲ್ಲಿ ಅಲ್ಪಸಂಖ್ಯಾತವಾದ ಆ ಭೂತಕಾಲದ ಪೈಶಾಚಿಕ ಚಾತುರ್ವರ್ಣವನ್ನು ಪ್ರತಿಪಾದಿಸುವ ಈ ಅಲ್ಪ ಹಿಂದೂ ಮತ**

ಪ್ರಬೇಧವನ್ನೇ ಬಹುಸಂಖ್ಯಾತ ಎಂದು ಬಿಂಬಿಸುತ್ತಿರುವ ಆರ್‌ಎಸ್‌ಎಸ್ ಗುಂಪೇ ದೇಶವನ್ನು ಹಿಂದಕ್ಕೆ ಎಳೆಯುತ್ತಿರುವ ಹಿನ್ನಡೆ ಗುಂಪು. ಇತ್ತೀಚೆಗೆ, ಮಕ್ಕಳ ಪಠ್ಯಪುಸ್ತಕದ ಪಾದಗಳನ್ನೂ ದೆವ್ವಗಳ ಪಾದಗಳಂತೆ ಹಿಂದಕ್ಕೆ ತಿರುಚಿ, ಹಿಂದುಹಿಂದಕ್ಕೆ ಚಲಿಸುವಂತೆ ಮಾಡಿದೆ. ಪೈಶಾಚಿಕ ಹಿಂಚಲನೆ ನಡಿಗೆ ಇವರದು. ಈ ಹಿನ್ನಡೆ ಗುಂಪುಗಳ ನಾನಾ ವೇಷಗಳನ್ನೆಲ್ಲಾ ಒಂದೊಂದಾಗಿ ಕಳಚಿ ಅದರ ನಿಜರೂಪವನ್ನು ಸಮಾಜದ ಮುಂದಿಡಬೇಕಾಗಿರುವುದು ತಕ್ಷಣದ ತುರ್ತು. ಇದಕ್ಕಾಗಿ ತಮ್ಮೆಲ್ಲ ಹೋರಾಟಗಳ ನಡುವೆಯೂ ಮುನ್ನಡೆಯವರು ಜಾಗೃತರಾಗಬೇಕಾಗಿದೆ.

ಈಗಲಾದರೂ ಸಮಾಜವನ್ನು ಮುನ್ನಡೆಗೆ ಒಯ್ಯ ಬೇಕೆಂದಿರುವ ಸಂಘ/ಸಂಘಟನೆ/ಪಕ್ಷಗಳು ತಂತಮ್ಮ ಸಣ್ಣ ಪುಟ್ಟ ಝರಿಗಳಂತಿರುವ ಸ್ಥಿತಿಯನ್ನು ಮೀರಿ ಒಕ್ಕೂಟವಾಗಿ ಹೊಳೆಯಾಗಿ ಹರಿಯಬೇಕಾಗಿದೆ. ಅದಕ್ಕಾಗಿ, ತಾನೇ ಶ್ರೇಷ್ಠ ಎಂಬ ಮಡಿ ರೋಗವನ್ನು ಬಿಡಬೇಕಾಗಿದೆ. ಅಹಂ ಕೂಡ ಬಿಡಬೇಕಾಗಿದೆ. ಗುರಿ ತಲುಪಲು ನೂರಾರು ದಾರಿಗಳೂ ಇರಬಹುದು ಎಂಬ ವಿನಯ ಬರಬೇಕಾಗಿದೆ. ನಾಯಕತ್ವದ ಶಠತ್ವವನ್ನು ಬಿಡಬೇಕಾಗಿದೆ. ತಾನೇ ಮಾಡಬೇಕು, ತನ್ನ ಸಂಘಟನೆಯೇ ಮಾಡಬೇಕು ಎಂಬ ಅಲ್ಪತನದ ಬದಲಾಗಿ ವಿಶಾಲ ಒಕ್ಕೂಟವೊಂದರಲ್ಲಿ, ಸಂವಿಧಾನದ ಪ್ರಸ್ತಾವನೆಯ

ಉಳಿವಿಗಾಗಿ, ಭಾರತದ ಪ್ರಾಣವಾದ ಬಹುತ್ವ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ಎಲ್ಲಾ ಪ್ರಜೆಗಳೂ ಭಾಗಿಯಾಗುವ ಸಹಭಾಗಿತ್ವದ ಪ್ರಜಾಪ್ರಭುತ್ವಕ್ಕಾಗಿ, ಮೇಲು ಕೀಳು ಇಲ್ಲದ ಸಹನೆ ಮತ್ತು ಪ್ರೀತಿಯ ಸಮಾನತಾ ಸಹಬಾಳ್ವೆಯ ಸಂಸ್ಕೃತಿಯನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕಾಗಿ ಜೊತೆಗೂಡಬೇಕಾಗಿದೆ. ಸಮಾಜದಲ್ಲಿ ನ್ಯಾಯ ಜೀವಿಸ ಬೇಕಾಗಿದೆ. ಎಲ್ಲರೂ ಸಮಾಜದಲ್ಲಿ ಸಮುದಾಯಗಳಲ್ಲಿ ಬೆರೆತು ಹೊಸ ಹುಟ್ಟು ಪಡೆಯಬೇಕಾಗಿದೆ. ಹೊಸ ನಡೆನುಡಿಗಳನ್ನು ಪಡೆಯಬೇಕಾಗಿದೆ.

ಮೊದಲನೆಯದಾಗಿ ನಮಗೆ ಎಚ್ಚರಬೇಕಾಗಿದೆ. ಏನೆಂದರೆ, ಛಿದ್ರತೆಯ ಆರ್‌ಎಸ್‌ಎಸ್‌ನ ಕೂಗುಮಾರಿಗಳ ಗುಂಪು ನಮ್ಮ ಮನೆ ಮುಂದೆ ಬಂದು ಕೂಗಿದಾಗ, ಅದಕ್ಕೆ 'ಓ'ಗೊಡದೆ, 'ನಾಳೆ ಬಾ' ಎಂದು ನಾವೂ ಕೂಡ ನಮ್ಮ ಜನಪದರಂತೆ ಬಾಗಿಲಲ್ಲಿ ಬರೆದಿಡಬೇಕಾಗಿದೆ. ನಾವು ಓಗೊಟ್ಟರೆ, ಅದರೊಡನೆ ದನಿಗೂಡಿಸಿದರೆ, ನಮ್ಮ ಪತನವು ಆ ಕ್ಷಣದಿಂದಲೇ ಹೆಜ್ಜೆ ಇಡತೊಡಗುತ್ತದೆ. ಹಳ್ಳಿಗಾಡಿನ ಅನುಭವಜನ್ಯವಾದ 'ಛಿದ್ರತೆಯೇ ದೆವ್ವ; ಐಕ್ಯತೆಯೇ ದೈವ' ಎಂಬ ವಿವೇಕ ನಮ್ಮದೂ ಆಗಬೇಕಾಗಿದೆ.

ಯಾಕೆಂದರೆ, ಇಂದು ಅಧರ್ಮವು ಧರ್ಮದ ಮುಖವಾಡ ತೊಟ್ಟು ಕುಣಿದು ಕುಪ್ಪಳಿಸುತ್ತಿದೆ. ಅಸಮಾನತೆಯೇ

ನೀತಿಯಾಗುತ್ತಿದೆ! ಧರೆಹತ್ತಿ ಉರಿದೊಡೆ ನಿಲ್ಲುವುದೆಂತು ಅಂತಾಗಿಬಿಟ್ಟಿದೆ. ಇಂತಹ ಆಳ್ವಿಕೆ ಎಲ್ಲಿಗೆ ತಲುಪಬಹುದು?

ಈಗ, ತನ್ನ ಬೆಂಬಲಿಗರಿಗೆ ಸುರೆ ಕುಡಿಸಿದ ಸುರ ರಾಜನ ಕತೆ ನೆನಪಾಗುತ್ತಿದೆ. ಒಬ್ಬ ಸುರರಾಜನು ತನ್ನ ಅನುಯಾಯಿಗಳು ತನ್ನ ಆಳ್ವಿಕೆಯನ್ನು ಪ್ರಶ್ನಿಸದಿರಲಿ, ಅವರು ತಮ್ಮ ಕಷ್ಟ ಸಮಸ್ಯೆ ಮರೆತು ಸಂತೋಷವಾಗಿರಲಿ, ಸದಾ ತನಗೆ ಜೈ ಜೈ ಅಂತಿರಲಿ ಹಾಗೂ ತನ್ನ ವಿರೋಧಿ ಗಳನ್ನು ಸದೆ ಬಡಿಯಲಿ ಅಂತ ತನ್ನ ಅನುಯಾಯಿಗಳಿಗೆ ಅರಮನೆಯಲ್ಲಿದ್ದ ಸುರೆ ಕುಡಿಸಿದನಂತೆ. ಆ ಸುರೆ ಕುಡಿದ ಅಮಲಿನಲ್ಲಿ ಅವನ ಅನುಯಾಯಿಗಳು ಸಮಾಜದಲ್ಲಿ ಯದ್ವಾತದ್ವಾ ದಾಂಧಲೆ ಎಬ್ಬಿಸುತ್ತಾರೆ. ತಮ್ಮ ಅಮಲೇ ಆನಂದವಾಗಿ ಸ್ವ-ನಿಯಂತ್ರಣ ಕಳೆದುಕೊಳ್ಳುತ್ತಾರೆ. ರಾಜನ ಆಳ್ವಿಕೆಯೂ ನಿಯಂತ್ರಣ ತಪ್ಪುತ್ತದೆ. ಸರೀಕರ ಎದುರು ಸುರರಾಜ ತಲೆತಗ್ಗಿಸುವಂತಾಗುತ್ತದೆ. ಆಗ ಸುರರಾಜ ತನ್ನ ಅಮಲಿನ ಸಮೂಹವನ್ನು ನಿಯಂತ್ರಿಸಲು ಮುಂದಾಗುತ್ತಾನೆ. ಆದರೆ ಅಮಲಿನ ಸ್ವ-ನಿಯಂತ್ರಣ ಕಳೆದುಕೊಂಡ ಅನು ಯಾಯಿಗಳು ಸುರರಾಜನ ಸಿಂಹಾಸನವನ್ನೆ ಬುಡಮೇಲು ಮಾಡಿಬಿಡುತ್ತಾರೆ! ತಾರತಮ್ಯ, ಛಿದ್ರತೆಯು ಅತಿಯಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಇಲ್ಲದೆಡೆ ಅದು ತಲುಪುವ ದುರಂತಕತೆ ಹೀಗಿದೆ. ಇದು ಇಂದೂ ನಡೆಯುತ್ತಿರಬಹುದು, ನಾಳೆಯೂ ನಡೆಯಬಹುದು.

ಯಾಕೆಂದರೆ, ಯಾವುದೇ ದ್ವೇಷದ ಅಮಲು, ಯಾವುದೇ ಜಾತಿಮತಧರ್ಮಾಂಧತೆಯ ಅಮಲು, ಯಾವುದೇ ಅತಿಯು ಕೊನೆಗೊಳ್ಳುವುದು ಬಹುಶಃ ಹೀಗೆಯೇ. ಬಿತ್ತಿದ್ದನ್ನು ಬೆಳೆದುಕೊ ಎಂಬಂತೆ! ದ್ವೇಷ, ಅಸಹನೆ, ಮೌಢ್ಯ ಇಂಥವುಗಳನ್ನು ಹುಟ್ಟು ಹಾಕಿ ಬೆಂಕಿ ಹಚ್ಚಿಬಿಟ್ಟರೆ ಮೊದಲು ಅದು ತನ್ನನ್ನು ಹುಟ್ಟಿಸಿದವರ ಇಚ್ಛೆಯಂತೆ ಸುಡುತ್ತಾ ಕೊನೆಗೆ ಅದು ಸುಟ್ಟು ಹಾಕುವುದು ಯಾರು ತನ್ನ ಹುಟ್ಟಿಗೆ ಕಾರಣರೋ ಅವರನ್ನೇ. ಒಬ್ಬ ಮಂತ್ರವಾದಿ ದ್ವೇಷ ಎಂಬ ಪಿಶಾಚಿಯನ್ನು ಸೃಷ್ಟಿಸಿ ಛೂ ಬಿಟ್ಟರೆ ಅದು ಎಲ್ಲವನ್ನೂ ತಿಂದುಕೊಂಡು ಬಂದು ಕೊನೆಗೆ ತನ್ನ ಹುಟ್ಟಿಗೆ ಕಾರಣನಾದ ತನ್ನ ಪಿತಾಮಹ ಮಂತ್ರವಾದಿಯನ್ನೆ ತಿಂದು ತೇಗಿ ತೃಪ್ತಿ ಪಡೆಯುತ್ತದಂತೆ. ಇದು ಮಂತ್ರ ತಂತ್ರದ ಮಾತಲ್ಲ. ಬಹುಶಃ ಪ್ರಕೃತಿಯ ಲಯ ಹೀಗೇ ಇರಬೇಕು. ಇಂದು ಆರ್‌ಎಸ್‌ಎಸ್ ಪರಿವಾರಕ್ಕೆ ಅತ್ಯಂತ ಹೆಚ್ಚಾಗಿ ಇದು ಸಲ್ಲುತ್ತದೆ. ಅವರಿಗೆ ಮಾತ್ರವಲ್ಲ, ಇಂಥವುಗಳನ್ನು ಯಾರು ಮಾಡುತ್ತಾರೋ ಅವರಿಗೂ ಕೂಡ. ಅಷ್ಟೇ ಅಲ್ಲ, ಇಂಥವುಗಳನ್ನು ನಾವು ಮಾಡಿದರೆ ನಮಗೂ ಕೂಡ. ಇದನ್ನು ನೆನಪಿಟ್ಟುಕೊಂಡು ಜೊತೆಗೂಡಿ ನಡೆಯೋಣ,

○

ಹೌದು, ಛಿದ್ರತೆಯೇ ದೆವ್ವ; ಐಕ್ಯತೆಯೇ ದೈವ – ಎಂಬ ವಿವೇಕ ನಮ್ಮದೂ ಆಗಬೇಕಾಗಿದೆ. ಇಂದು ಛಿದ್ರತೆ ಮಿತಿಮೀರುತ್ತಿದೆ. ಅಧರ್ಮವು ಧರ್ಮದ ಮುಖವಾಡ ತೊಟ್ಟು ಕುಣಿದು ಕುಪ್ಪಳಿಸುತ್ತಿದೆ. ಅಸಮಾನತೆಯೇ ನೀತಿಯಾಗುತ್ತಿದೆ ! ಧರೆಹತ್ತಿ ಉರಿದೊಡೆ ನಿಲ್ಲುವುದೆಂತು ಅಂತಾಗಿಬಿಟ್ಟಿದೆ. ಇಂತಹ ಆಳ್ವಿಕೆ ಎಲ್ಲಿಗೆ ತಲುಪಬಹುದು?

ಕೂಗುಮಾರಿ ಮನೆಮುಂದೆ ಬಂದು ಕೂಗಿದಾಗ ಅದಕ್ಕೆ 'ಓ'ಗೊಟ್ಟರೆ ಅಥವಾ 'ಕರೆದವರು ಯಾರು?' ಅಂತ ಕೂಗುಮಾರಿಗೆ ಸ್ಪಂದಿಸಿದರೆ, ಅವರು ರಕ್ತ ಕಾರಿಕೊಂಡು ಸಾಯುತ್ತಾರೆ ಎನ್ನುವುದು ನಮ್ಮ ಜನಪದರ ನಂಬಿಕೆ. ಅದಕ್ಕಾಗಿ 'ನಾಳೆ ಬಾ' ಅಂತ ಬಾಗಿಲ ಮುಂದೆ ಬರೆದಿರುತ್ತಾರೆ.

ಛಿದ್ರತೆಯ, ತಾರತಮ್ಯ ಬಿತ್ತನೆ ಮಾಡುವ ಕೂಗುಮಾರಿಗಳ ಗುಂಪು ನಮ್ಮ ಮನೆ ಮುಂದೆ ಬಂದು ಕೂಗಿದಾಗ, ಅದಕ್ಕೆ 'ಓ'ಗೊಡದೆ 'ನಾಳೆ ಬಾ' ಎಂದು ನಾವೂ ಕೂಡ ನಮ್ಮ ಜನಪದರಂತೆ ಬಾಗಿಲಲ್ಲಿ ಬರೆದಿಡಬೇಕಾಗಿದೆ. ನಾವು ಓಗೊಟ್ಟರೆ, ಅದರೊಡನೆ ದನಿಗೂಡಿಸಿದರೆ, ಆ ಕ್ಷಣದಿಂದಲೇ ನಮ್ಮ ಪತನವು ಹೆಜ್ಜೆ ಇಡತೊಡಗುತ್ತದೆ. ಹಳ್ಳಿಗಾಡಿನ ಅನುಭವಜನ್ಯವಾದ 'ಛಿದ್ರತೆಯೇ ದೆವ್ವ; ಐಕ್ಯತೆಯೇ ದೈವ' ಎಂಬ ವಿವೇಕ ನಮ್ಮದೂ ಆಗಬೇಕಾಗಿದೆ.

(ಆರ್.ಎಸ್.ಎಸ್. ಆಳ ಮತ್ತು ಅಗಲದ ಒಳಗಿಂದ)

Shop Online
www.navakarnataka.com
facebook.com/navakarnataka

Code:004154
₹ 40